The Hon'ble Sri H. C. DASAPPA.— Sir, I beg to move:

"That the Mysore Appropriation No 2 Bill, 1951, be passed".

Mr. SPEAKER. —The question is:

"That the Mysore Appropriation No. 2 Bill, 1951, be passed".

The motion was adopted.

The Mysore Appropriation No. 3 Bill, 1951.

Motion to introduce.

The Hon'ble Sri H. C. DASAPPA (Minister for Finance and Industries).— Sir, I beg to introduce the Mysore Appropriation No. 3 Bill, 1951. The same has been published in the *Mysore Gazette* Extraordinary dated on 31st March 1951 under Rule 36 of the Mysore Legislative Rules.

Suspension of Standing Order.

The Hon'ble Sri H. C. DASAPPA.— Sir, I beg to move also that Standing Order 30 be suspended. So that the Bill may be taken into consideration at once.

Mr. SPEAKER.—I have no objection to suspend the Standing Order.

Motion to consider.

The Hon'ble Sri H. C. DASAPPA.— Now, that the Standing Order 30 has been suspended, I beg to move:

"That the Mysore Appropriation No. 3 Bill, 1951, be taken into consideration".

This, as the Hon'ble Members are aware, refers to the Budget Estimates of 1951-52. It only remains for me to thank all the Hon'ble Members most sincerely for the support they have accorded to the Estimates. I assure the Hon'ble Members that the various suggestions they have made, the criticisms they have offered will all be taken due note of and the Government will do their best to do fair and just thing to meet the wishes of the House.

So far as several motions which, unfortunately, for want of time could not be taken up, are concerned there again I assure the Hon'ble Members that each one of the motions would be examined on its merits and we will try to do our best, there again, to do the right thing. I am only sorry that this time Hon'ble Members had not sufficient time to consider the various Demands but according to the new Rules, I am, sure, when next they meet, they will have ample time to consider the various grants in much more detail than they were able to do now. I thank the House.

Mr. SPEAKER.—Motion moved;

"That the Mysore Appropriation No. 3 Bill, 1951, be taken into consideration".

Sri M. N. JOIS (Mysore District-General).— I have just got a point to bring to the notice of the Chair.

ನಿನ್ನೆ ದಿವಸ 55ನೆಯ ಡಿಮ್ಯಾಂಡಿಗೆ ನಾನು ಪ್ರೋತಾ ಸೂಚನೆಯನ್ನು ಕಳುಹಿಸಿಕೊಟ್ಟಿದ್ದನ್ನು ಸಭೆಯಲ್ಲಿ ಮಂಡಿಸಿದ ಮೇರೆ 12½ ಘಂಟೆಗೆ ಕಾರ್ಯಕಲಾಪಗಳನ್ನು ಮುಗಿಸುವ ಸಂದರ್ಭದಲ್ಲಿ ನಾನು ನನ್ನ ಪ್ರೋತಾ ಸೂಚನೆಯನ್ನು ವಾಪಸು ತೆಗೆದುಕೊಳ್ಳಲಿಲ್ಲ. ಅಧ್ಯಕ್ಷರು ಆ ಸೂಚನೆಯನ್ನು ಓಟಿಗೂ ಹಾಕಲಿಲ್ಲ. For or against ಏನೊಂದೂ ತೆಗೆದುಕೊಂಡಿಲ್ಲ. ಹೀಗಿದ್ದರೂ ಇಲ್ಲಿ ನಮಗೆ ಕಳುಹಿಸಿಕೊಟ್ಟಿರುವ transcripts ನಲ್ಲಿ "Demand motion was passed" ಎಂದು ಹೇಳಿದೆ.

The cut motion was not withdrawn. by me. ಈ ವಿಷಯವನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ.

Mr. SPEAKER.— It was withdrawn.

Sri M. N. JOIS.—I did not withdraw but the Hon'ble Speaker has presumed that I withdrew; I have no alternative. I have only brought it to the notice of the Hon'ble Speaker.

Mr. SPEAKER.—As soon as it was 12-30, I remember to have said that it was withdrawn. And then the main motion was put to vote.

Sri B. N. BORANNA GOWDA (Hassan District-General).—He did not press it to a division.

The Hon'ble Sri K. T. BHASHYAM (Minister for Law and Labour).—We were pleased to allow the Hon'ble Member to withdraw.

Sri D. H. CHANDRASEKHARAIYA (Chitaldrug District-General).—The Hon'ble Speaker asked 'whether you are withdrawing the cut motion or not". Those words I remember very well. It was withdrawn.

Mr. SPEAKER.—I do not know whether he was absent-minded.

(Laughter)

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ನಾನು ಅಧ್ಯಕ್ಷರ ಗಮನಕ್ಕೆ ಒಂದು ವಿಚಾರ ತರಲಪೇಕ್ಷಿಸುತ್ತೇನೆ. ಏನೆಂದರೆ, ಈ ಅಂದಾಜು ಪಟ್ಟಿಯನ್ನು ನಾನಾ ದೃಷ್ಟಿಯಿಂದ ಪರಿಶೀಲಿಸುವುದಕ್ಕೆ ಸಾಕಾಗಷ್ಟು ಅವಕಾಶ ಸಿಕ್ಕಿಲ್ಲ. ಮುಂದಿನ ಸಾರಿಯಾದರೂ ಈ ದೋಷವನ್ನು ನರಿಪಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಹೊಸ ನಿಬಂಧನೆಗಳು ಜಾರಿಗೆ ಬರುತ್ತವೆಂದು ಹೇಳಿದರಲ್ಲಾ.

ಶ್ರೀ ಬಿ. ಹುಚ್ಚೇಗೌಡರು.—ನಾನೂ ಅದೇ ವಿಚಾರದಲ್ಲೇ ಹೇಳುತ್ತಿದ್ದೇನೆ. ಆ ಕಮಿಟಿಯ ವರದಿ ಬಂದು ಬಹಳ ದಿವಸಗಳಾಯಿತು. ಆದಷ್ಟು ಜಾಗ್ರತೆ ಈ ಸಭೆಯ ಮುಂದಿಡುವುದಕ್ಕೆ ಪ್ರಯತ್ನವಾಡಬೇಕೆಂದು ನಾನು ಅರಿಕೆಮಾಡಿಕೊಳ್ಳುತ್ತೇನೆ.

ಸ್ವಾಮಿ, ದೇಶದಲ್ಲಿ ಈಗ ಮುಖ್ಯವಾಗಿ ಆಗಿರತಕ್ಕ ಬದಲಾವಣೆಗನುಸಾರವಾಗಿ ಆಡಳಿತವನ್ನು ಮತ್ತು ಅದರ ಅಂಗವಾದ ದೇಶದ ಬಡ್ಜೆಟ್ಟನ್ನು ನರಿಮಾಡತಕ್ಕದ್ದು ಸರ್ಕಾರದವರ ಕರ್ತವ್ಯ. ಪ್ರಜಾಪ್ರಭುತ್ವ ಆಡಳಿತದ ಮೊದಲನೆಯ ಸೂತ್ರವೇನೆಂದರೆ ದೇಶದ ಪ್ರತಿಯೊಬ್ಬ ಪ್ರಜೆಯೂ ಸಾಧ್ಯವಾದಮಟ್ಟಿಗೂ ಸಪ್ಪ ಜೆಯಾಗಿ ಬಾಳುವುದಕ್ಕೆ, ಒಳ್ಳೆಯ ಪ್ರಜೆಯಾಗಿ ಬಾಳುವುದಕ್ಕೆ ಸಾಧಕವಾದ ವಿದ್ಯಾಭ್ಯಾಸಕ್ಕೆ ಅವಕಾಶ ಮಾಡಿಕೊಡುವುದು ಬಹಳ ಮುಖ್ಯ. ಹೀಗಿರುವಲ್ಲಿ ಸರ್ಕಾರದವರು ಯಾವುದೊಂದು ಹೊಸಮಾರ್ಗವನ್ನೂ ಕೈಕೊಂಡು ಈಗಿರತಕ್ಕ ವಿದ್ಯಾಭ್ಯಾಸ ಸ್ಥಿತಿಯನ್ನು ಉತ್ತಮಪಡಿಸುವುದಕ್ಕೆ ಗಮನ ಕೊಟ್ಟಿಲ್ಲ. ತಾವಾಗಿಯೇ initiative ತೆಗೆದುಕೊಂಡು ಮಾಡಬೇಕಾದ ಕೆಲಸ. ಏಕೆಂದರೆ ಭಾರತದ ರಾಜ್ಯಾಂಗ ಶಾಸನದ 45ನೆಯ ಸೆಕ್ಷನಲ್ಲೇ ಈ ವಿಚಾರದಲ್ಲಿ ಸರ್ಕಾರದ ಕರ್ತವ್ಯವೇನೆಂಬುದನ್ನು ಹೇಳಿದೆ. ಅದರಲ್ಲಿ ಹೇಳಿದೆ

"The State shall endeavour t provide, within a period of 10 years from the commencement of this Constitution, for free and compulsory education for all children until they complete the age of fourteen years"

ಎಂದು. ಇದು ಸರ್ಕಾರದಮೇಲೆ binding ಆಗಿರುತ್ತದೆಂದು ನಾವು ತಿಳಿದುಕೊಂಡಿದ್ದೆವು, ದೇಶ ಮುಂದಕ್ಕೆ ಮುಂದಕ್ಕೆ ಬಂದೀತೆಂದು ಭಾವಿಸಿದ್ದೆವು. ಆದರೆ ಇದನ್ನು ಆಚರಣೆಗೆ ತರುವುದಕ್ಕೆ ಏನನ್ನೂ ಮಾಡಿಲ್ಲ! ಅದಕ್ಕೆ ಬದಲಾಗಿ ವರ್ಷ ವರ್ಷಕ್ಕೂ ಪ್ರಯತ್ನ ಕಡಿಮೆಯಾಗುತ್ತಲಿದೆ. ದೇಶದಲ್ಲೆಲ್ಲಾ ಪ್ರಾಥಮಿಕ ವಿದ್ಯಾಭ್ಯಾಸವನ್ನು ಒತ್ತಾಯವಾಗಿ ಜಾರಿಗೆ ತರಬೇಕೆಂದು 1941ನೆಯ ಇಸವಿಯಲ್ಲಿ ಮೊದಲು ಜಾರಿ ಮಾಡಿತು. 1944ನೆಯ ಇಸವಿಯಲ್ಲಿ ಇದನ್ನು ಸ್ವಲ್ಪ ಬದಲಾವಣೆ ಮಾಡಿ ಪ್ರಾಥಮಿಕ ಶಾಲೆಗೆ ಸೇರಿದ ಮಕ್ಕಳಲ್ಲಿ 100ಕ್ಕೆ 75 ಜನರು 3–4ನೆಯ ತರಗತಿಗೆ ಬರುವ ವೇಳೆಗೆ ಬಿಟ್ಟು ಹೋಗುತ್ತಿರುವುದನ್ನು ಮನಗಂಡು, ಈ ಮುಖ್ಯ ದೋಷವನ್ನು ನರಿಪಡಿಸುವುದಕ್ಕಾಗಿ partial compulsory systemನ್ನು ಜಾರಿಗೆ ತಂದರು. 36 ತಾಲ್ಲೂಕುಗಳಲ್ಲಿ partial compulsory education ಜಾರಿಗೆ ಬಂದಿದೆ. ಹೀಗೆ 1946–47ರಲ್ಲಿ ಒಂದೊಂದು ಜಿಲ್ಲೆಗೆ ಒಂದೊಂದು ತಾಲ್ಲೂಕಿನಂತೆ 19 ತಾಲ್ಲೂಕುಗಳಲ್ಲಿ ಈ ಬಲಾತ್ಕಾರ ವಿದ್ಯಾಭ್ಯಾಸ ಜಾರಿಗೆ ಬಂದಿದೆ. ಹಿಂದೆ ಹಾಗೆ ಬೇಜವಾಬ್ದಾರಿಯಾಗಿದ್ದಂಥ ಸರ್ಕಾರ ಕೂಡ ಇಂಥ ಕೆಲಸಗಳನ್ನು ಮಾಡುತ್ತಿತ್ತು. ಆದರೆ ತಾವು ಅಂಥ ಒಂದು ಅನುಕೂಲವಾದ ವಿಚಾರವನ್ನು ದೇಶದ ಜನರ ಹಿತದೃಷ್ಟಿಯಿಂದ ಮಾಡಬೇಕಾದುದನ್ನು ಮಾಡದೆ ಬಿಟ್ಟಿದ್ದು ತುಂಬಾ ಅನ್ಯಾಯ.

The Hon'ble Sri H. C. DASAPPA.—Sir, shall I rise not exactly to a point of order, but to bring to notice what the Hon'ble Speaker has been pleased to rule last year?

ಇದರ ವಿಷಯದಲ್ಲಿ ಚರ್ಚೆ ಮಾಡುವಾಗ, ತಾವು ನಿನ್ನೆಯ ದಿವಸ ಮದ್ರಾಸ್ ಲೆಜಿಸ್ಲೇಟಿವ್ ಅಸೆಂಬ್ಲಿಯಲ್ಲಿ ಚರ್ಚೆಯಾಗಿರುವುದನ್ನು ತೋರಿಸಬಹುದು. ಇಂಥಾ ವಿಷಯ ಚರ್ಚೆ ಮಾಡಿ, ಇಂಥಾ ವಿಷಯ ಬೇಡಿ ಎಂದು ಹೇಳುವುದಕ್ಕೆ ಬಹುಶಃ ಸಾಧ್ಯವಿಲ್ಲ. ಆದರೆ ಸದಸ್ಯರು ಚರ್ಚೆ ಮಾಡಿದ ವಿಷಯವನ್ನೇ ಪುನಃ ಚರ್ಚೆ ಮಾಡಿ, ಸಭೆಯ ಕಾಲವನ್ನು ಕಳೆಯುವುದು ಉಚಿತವೇ ಅಲ್ಲವೇ ಎಂಬುದನ್ನು ಯೋಚನೆ ಮಾಡಿ ಎಷ್ಟು ಅವಶ್ಯಕವೋ ಅಷ್ಟನ್ನು ಹೇಳಬೇಕು. ಏಕೆಂದರೆ ಶ್ರೀಮಾನ್ ದಾಸಪ್ಪನವರು ಹೇಳಿದ ಹಾಗೆ ಎರಡು ಸಲ ಈ ವಿಷಯನ್ನು ಚರ್ಚೆ ಮಾಡುವುದಕ್ಕೆ ಅವಕಾಶವಾಗಿದೆ. ಆದರೂ ಈ ವಿಷಯವನ್ನು ಚರ್ಚೆ ಮಾಡುವುದಕ್ಕೆ ಅವಕಾಶವೇ ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ" (ಎಂದು ಈ ಬಗ್ಗೆ ರೂಲಿಂಗ್ ಕೊಡಲಾಗಿದೆ. ಹಾಗೆ ಒಂದಾವರ್ತಿ ಮಾನ್ಯ ಅಧ್ಯಕ್ಷರು ಹೇಳಿದ ಸಲ ಈ ಸಭೆಯ ಮುಂದೆ ಕೊಟ್ಟ ರೂಲಿಂಗನ್ನು ಅನುಸರಿಸಿ ಸದಸ್ಯರು ತಮ್ಮ ಭಾಷಣವನ್ನು ಮುಂದುವರಿಸಿದರೆ ಈ ಸಭೆಗೆ ಗೌರವ ತಂದಂತಾಗುತ್ತದೆ. ಈ ಸಭೆಯ ಗೌರವವನ್ನು ಕಾಪಾಡತಕ್ಕದ್ದು ನಮ್ಮೆಲ್ಲರ ಜವಾಬ್ದಾರಿ.

ಶ್ರೀ ಬಿ. ಹುಚ್ಚೇಗೌಡರು.—ನಾನು ಅಧ್ಯಕ್ಷರ ರೂಲಿಂಗಿಗೆ ವಿರೋಧವಾಗಿ ಹೋಗಲಿಕ್ಕೆ ಇಷ್ಟಪಡುವುದಿಲ್ಲ.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು (ಸ್ಥಳೀಯ ಸಂಸ್ಥೆಗಳ ನಚಿವರು).—ಜನರು ಈಗ ಜಾಗ್ರತಿಗೊಂಡಿದ್ದಾರೆ. ಹಿಂದುಳಿದಿದ್ದವರೆಲ್ಲ ಈಗ ತಾವಾಗಿಯೇ ಮುಂದೆ ಮುಂದೆ ಬರುತ್ತಿದ್ದಾರೆ. ಹೀಗಿರುವುದರಿಂದ ಅವರಿಗೆ ಬಲಾತ್ಕಾರ ಮಾಡಬೇಕಾದ ಆವಶ್ಯಕತೆಯೇ ಇರುವುದಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಈ ವಿಷಯವಾಗಿ ಯಾರೊಬ್ಬರೂ ಖೋತಾ ಸೂಚನೆಗಳನ್ನು ತಂದಿಲ್ಲ. ಹಾಗೇನಾದರೂ ಒಂದು ವೇಳೆ ತಂದಿದ್ದರೆ ಆಗ ಮಾತನಾಡಲು ಹೆಚ್ಚಿನ ಅವಕಾಶ ಸಿಕ್ಕುತ್ತಿತ್ತು. ಆದರೆ ಅಂಥಾ ಸನ್ನಿವೇಶಗಳೇನೂ ಇಲ್ಲದಿರುವಾಗ ತಾವು ಇದರ ಬಗ್ಗೆ ಮಾತನಾಡಲು ಸ್ವಲ್ಪ ಹೆಚ್ಚಿನ ಕಾರಾವಕಾಶ ಕೊಡತಕ್ಕದ್ದು ನ್ಯಾಯವಾಗಿದೆ. ಇಷ್ಟು ಮಾತ್ರ ತಮ್ಮ ಆಡಳಿತ ಒಂದರ ಮೇಲೆ ಟೀಕೆ ಮಾಡಿದರೆ ತಾವು ಇಷ್ಟು ಹೆದರುತ್ತಿರುವುದರಿಂದ ಇದರಲ್ಲಿ ಎಷ್ಟರಮಟ್ಟಿಗೆ ಹೊಳ್ಳಿದೆಯೆಂಬುದನ್ನು ಮತ್ತೆನಾನು ಹೇಳಬೇಕಾದುದೇ ಇಲ್ಲ. ಬರೀ ಒಂದು ರುಜು ಹಾಕುವುದು ಬಂದಮಾತ್ರಕ್ಕೇ ಆತನು ವಿದ್ಯಾವಂತನೆಂದು ಹೇಳಿಕೊಳ್ಳುವುದಕ್ಕಾಗುವುದಿಲ್ಲ. 6 ವರ್ಷದಿಂದ ಹಿಡಿದು 16 ವರ್ಷಗಳ ತನಕ, ಪ್ರತಿಯೊಬ್ಬರಿಗೂ ಈ ವಿದ್ಯಾಭ್ಯಾಸವನ್ನು ಬಲಾತ್ಕಾರವಾಗಿ ಕೊಡಲೇ ತೀರಬೇಕು. ಮೈಸೂರು ದೇಶದಲ್ಲಿ ಅನೇಕ ವರ್ಷಗಳಿಂದ ವಿಶೇಷ ಹಣವನ್ನು ಈ

ವಿದ್ಯಾಭ್ಯಾಸದ ಬಾಬಿಗೆ ಖರ್ಚು ಮಾಡಿದ್ದರೂ ದೇಶದಲ್ಲಿ ವಿದ್ಯಾಭ್ಯಾಸ ಮುಂದುವರಿದಿಲ್ಲ. ತಿರುವಾಂಕರಿನಲ್ಲಿ ವಿದ್ಯಾವಂತರ ಸಂಖ್ಯೆ ನಮ್ಮ ಮೈಸೂರಿಗಿಂತಲೂ ಹೆಚ್ಚಾಗಿದೆ. ಅಲ್ಲಿನ ವಿದ್ಯಾಭ್ಯಾಸದ ಪರ್ಸೆಂಟೇಜ್ 45-46 ಇದೆ. ನಮ್ಮಲ್ಲಾದರೋ ಕೇವಲ 13 ಪರ್ಸೆಂಟ್.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು (ರೆವಿನ್ಯೂ ಮತ್ತು ಅಬ್ಕಾರಿ ಸಚಿವರು).—ತಾವು ಹೇಳುತ್ತಿರುವುದು 1931ರ ಲೆಕ್ಕ. ಈಗ ಆ ವಿದ್ಯಾವಂತರ ಸಂಖ್ಯೆ ನಮ್ಮ ಮೈಸೂರಿನಲ್ಲಿ ಸೇಕಡ 21 ಕ್ಕೆ ಏರಿರುತ್ತೆ.

ಶ್ರೀ ಬಿ. ಹುಚ್ಚೇಗೌಡರು.—ಹಾಗೆ ನಮ್ಮ ಮೈಸೂರಿನದು ಈಗ 21 ಪರ್ಸೆಂಟ್‌ಗೆ ಏರಿರಬೇಕಾದರೆ ಆ ತಿರುವಾಂಕೂರಿನ ಪರ್ಸೆಂಟೇಜು 62-63ಕ್ಕೆ ಹೋಗಿರಬೇಕು. ಆದರೆ ವಿದ್ಯಾಭ್ಯಾಸ ನಮ್ಮಲ್ಲಿ ಮುಂದುವರಿದಿದೆ ಎಂದು ಹೇಳುವುದಕ್ಕೆ ಆಧಾರವೇ ಇಲ್ಲ. ಆ ತಿರುವಾಂಕೂರಿನ ದಾಮಾಷಾ ಪ್ರಕಾರ ನೋಡಿದಲ್ಲಿ ನಮ್ಮ ಮೈಸೂರಿನ ವಿದ್ಯಾವಂತರ ಸಂಖ್ಯೆ 13 ಇದ್ದುದು ಇಂದು 47ಕ್ಕೆ ಏರಬೇಕಾಗಿತ್ತು. ಅದರೆ ಅಷ್ಟಕ್ಕೆಏರದೆ ಇರುವುದರಿಂದ ನಾವು ವಿದ್ಯದಲ್ಲಿ ತಿರುವಾಂಕೂರಿನವರನ್ನು ಮೀರಿಸಿದ್ದೇವೆಂದು ಹೇಳುವ ಹಾಗಿಲ್ಲ. ಆದರೆ ನಮ್ಮನ್ನೆ ಒಂದು ಚರ್ಚೆ ಮಾಡತಕ್ಕಉದ್ದೇಶಕ್ಕಾಗಿಯೇ ನಾನು ವಾದ ಮಾಡುತ್ತಿದ್ದೇನೆಂದು ಯಾರೂ ಭಾವಿಸಬಾರದು. ಹಿಂದೆ ಇದ್ದಂಥ ಬೇಜವಾಬ್ದಾರಿ ಸರ್ಕಾರವೂ ಕೂಡ ಇಂಥಾದ್ದನ್ನು ಮಾಡಿತ್ತು. ಅದನ್ನಾದರೂ ತಾವು ಮುಂದಕ್ಕೆ ಆಚರಣೆಗೆ ತಂದಿದ್ದರೆ ಚೆನ್ನಾಗಿತ್ತು. ಆದರೆ ಹಾಗೆ ಮಾಡುವುದಕ್ಕೆ ಪ್ರತಿಯಾಗಿ ತಾವು ಆ ಬಾಬನ್ನೇ ತೆಗೆದುಹಾಕಿದ್ದೀರಿ. ಅದನ್ನು ಪುನಃ ಜಾರಿಗೆ ತರಬೇಕೆಂದು ತಮ್ಮನ್ನು ಪ್ರಾರ್ಥಿಸುತ್ತೇನೆ. ಹೀಗೆ ತಾವು ಒಂದೊಂದು ಶಾಲೆಯಲ್ಲೂ 50 ಹುಡುಗರಂತೆ ವರ್ಷಕ್ಕೆ 500 ಜನರನ್ನಾದರೂ ವಿದ್ಯಾವಂತರನ್ನಾಗಿ ಮಾಡಿದ್ದರೆ ಇಂದು ನಮ್ಮ ದೇಶದಲ್ಲಿ ಸುಮಾರು 2500 ಅಥವ 3,000 ಜನ ವಿದ್ಯಾವಂತರ ಸಂಖ್ಯೆ ಈ ವರ್ಷಗಳಲ್ಲಿ ಅಂದರೆ 1944-45 ರಿಂದ ಇಲ್ಲಿಯವರಿಗೆ, ಹೆಚ್ಚಾಗುತ್ತಿತ್ತು. ಆದರೆ ತಾವು ಅಂಥ partial ಎಜುಕೇಷನ್ನು ಬಲಾತ್ಕಾರವಿದ್ದುದ್ದನ್ನು ಈಗ ನಿಲ್ಲಿಸಿ ದೇಶದಲ್ಲಿ ಅವಿದ್ಯಾವಂತರ ಸಂಖ್ಯೆಯು ಹೆಚ್ಚುವುದಕ್ಕೆ ದಾರಿ ಮಾಡಿದ್ದೀರಿ. 1944-45ರಲ್ಲಿ ಅವಿದ್ಯಾವಂತ ಬಾಲಕರ ಸಂಖ್ಯೆ ನಮ್ಮ ದೇಶದಲ್ಲಿ 6 ಲಕ್ಷ 90 ಸಾವಿರ ಇತ್ತು. ಆದರೆ ಅದು 1946-47 ರಲ್ಲಿ 7 ಲಕ್ಷ 54 ಸಾವಿರವಾಯಿತು. ಹೀಗೆ ದಿನದಿನಕ್ಕೂ ನಮ್ಮ ಮೈಸೂರಿನ ವಿದ್ಯಾಭ್ಯಾಸ ಮುಂದುವರಿಯುವ ಬದಲು ದಿನ ದಿನಕ್ಕೂ ಹಿಂದೆ ಹೋಗುತ್ತಿದೆ. ಸರ್ಕಾರದವರು ಹೊರಡಿಸಿರತಕ್ಕ The Mysore on the March ಎಂಬ ಪುಸ್ತಕದಲ್ಲಿ ಹೀಗೆ ಹೇಳಿದ್ದಾರೆ.—

"The scheme of compulsory attendance in primary schools which was introduced in 1944-45 was continued in 9 taluks.....and full compulsion was introduced in the 9 District headquarters and 9 taluks at a cost of 5 lakhs per annum recurring and 15 lakhs non-recurring."

ಈ ರೀತಿ ಒಂದು ಅಡ್ವರ್ಟೈಜ್ ಮಾಡಿಕೊಂಡಿರುತ್ತಾರೆ. ಇದು ಜನರನ್ನು ಯಾವ ರೀತಿ mislead ಮಾಡುತ್ತಿದೆಯೆಂಬುದನ್ನು ತಾವು ಇದರಿಂದ ನೋಡಬಹುದು. ಹೀಗೆ ಈ ರೀತಿ ಆಗುತ್ತಿರುವುದಕ್ಕೆ ಕಾರಣ ಸರ್ಕಾರದವರು ಹಿಂದೂ ಮುಂದೂ ನೋಡದೆ, ಯಾವ ಒಂದು ನಿರ್ಧರವಾದ ಕಾರ್ಯಕ್ರಮಗಳನ್ನೂ ಕೈಗೊಳ್ಳದೆ ಇರುವುದರಿಂದ 6 ವರ್ಷಗಳಿಗೆ ಮೇಲ್ಪಟ್ಟು 14 ವರ್ಷದ ವಯಸ್ಸಿನ ಒಳಗಿರತಕ್ಕಂಥವರಿಗೆಲ್ಲ ವಿದ್ಯಾಭ್ಯಾಸ ದೊರೆಯದೆ ಅನಾನುಕೂಲವಾಗಿದೆ. ಈ ವಿಚಾರದಲ್ಲಿ ಸರ್ಕಾರದವರ ನೀತಿಯು ಖಂಡಿನಲ್ಪಡತಕ್ಕದ್ದಾಗಿದೆ. ಈಗಿನ ಹೊಸ ರಾಜ್ಯಾಂಗದ ಪ್ರಕಾರ ಮತದಾನ ಪದ್ಧತಿಯು ವಯಸ್ಕರಿಗೆಲ್ಲ ಬಂದಿದೆ. ಆದರೆ ಹೀಗೆ ಇಂದೂ ಈ ಮತದಾರರು ವಿದ್ಯಾವಂತರಾಗಿಲ್ಲದೆ ಇರುವುದು ತುಂಬಾ ವಿಷಾದಕರ. ಇವರು ತಿಳಿಸಿರುವ ಪ್ರಕಾರ ನೋಡಿದರೂ 1944-45 ರಿಂದ ವರ್ಷ ಒಂದಕ್ಕೆ 5 ಲಕ್ಷ ರೂಪಾಯಿಗಳಂತೆ ವೆಚ್ಚ ಮಾಡಿತ್ತ, ಕಳೆದ 5 ವರ್ಷಗಳಲ್ಲಿ ಕೇವಲ 4 ಲಕ್ಷ ಜನರನ್ನು ಮಾತ್ರ ವಿದ್ಯಾವಂತರನ್ನಾಗಿ ಮಾಡಿದ್ದಾರೆ. ಆದರೆ ನಮ್ಮ ದೇಶದಲ್ಲಿ 10 ವರ್ಷಗಳ ಮೇಲ್ಪಟ್ಟ 50 ವರ್ಷಗಳ ವಯಸ್ಸಿನಲ್ಲಿರುವವರಲ್ಲಿ 40 ಲಕ್ಷ ಜನರಿದ್ದಾರೆ. ಇವರಲ್ಲಿ ಅವಿದ್ಯಾಪರರಿದ್ದಾರೆ. ಅಂದ ಮೇಲೆ ಈ 40 ಲಕ್ಷ ಜನರೂ ಎಂದಿಗೆ ವಿದ್ಯಾವಂತರಾಗುವುದು! ಹೀಗೆ ಇವರಿಗೆ ಬಾಲ್ಯದಲ್ಲೇ ಒಂದು ಒತ್ತಾಯ ಶಿಕ್ಷಣ ದೊರೆದೆ ಹೋದರೆ ಮುಂದೆ ಅವರು ವಿದ್ಯಾವಂತರಾಗಲು ಸಾಧ್ಯವಿದೆಯೇ? ಆದುದರಿಂದ ಈ ವಿದ್ಯಾಭ್ಯಾಸದ ವಿಷಯದಲ್ಲಿ ಒಂದು ನಿರಿಯಾದ ಮತ್ತು ನಿರ್ದಿಷ್ಟವಾದ ಕಾರ್ಯನೀತಿಗಳನ್ನು ಗೊತ್ತು ಮಾಡಿಕ್ಕೊಂಡು, ಇಂತಿಷ್ಟು ವರ್ಷಗಳಲ್ಲಿ ನಮ್ಮ ಒಂದು ಆ ಗುರಿ ಏನಿದೆಯೇ ಅದನ್ನು ಮುಟ್ಟುವಂತೆ ಒಂದು ಕಡ್ಡಾಯವಾದ ಯೋಜನೆಯನ್ನು ಹಾಕಿಕ್ಕೊಂಡು ಅದರಂತೆ ಮಾಡದೆ ಹೋದರೆ ನಾವು ನಮ್ಮ ನೆರೆಹೊರೆ ಪ್ರಾಂತಗಳವರಿಗಿಂತಲೂ ಹಿಂದುಳಿಯುತ್ತೇವೆಂದು ಹೇಳುವುದರಲ್ಲಿ ಯಾವ ಅಡ್ಡಿಯೂ ಇಲ್ಲ.

ಈ ದಿವಸ ನಮ್ಮ ದೇಶದಲ್ಲಿ ಆರ್ಥಿಕ ಪರಿಸ್ಥಿತಿಯಲ್ಲಿ ಹಿಂದುಳಿದಿದ್ದೇವೆ. ಈ ವಿಚಾರದಲ್ಲಿ ಮುಂದೆ ಬರುವುದಕ್ಕೆ ವಿದ್ಯಾಭ್ಯಾಸ ಮುಖ್ಯವಾದದ್ದು. ಅಮೇರಿಕ ಮುಂತಾದ ಕಡೆ ಸೇಕಡ 80 ಮಂದಿಯವರೆಗೆ ವಿದ್ಯಾವಂತರಾಗಿದ್ದಾರೆ, ಅಲ್ಲಿನವರು ಐಶ್ವರ್ಯವಂತರಾಗುವುದಕ್ಕೆ ಕಾರಣ ವಿದ್ಯಾಭ್ಯಾಸದಲ್ಲಿ ಮುಂದುವರಿದಿರುವುದು.

ಇನ್ನು ನೀರಾವರಿ ವಿಚಾರವಾಗಿ ಆಗಲೇ ಹೇಳಿದ್ದೇನೆ. ಸರ್ಕಾರದವರು ಬೇಕಾದಷ್ಟು ದ್ರವ್ಯವನ್ನು ಒದಗಿಸಿಕೊಡುತ್ತಿಲ್ಲ. ಇದನ್ನು ತೀವ್ರ ಗತಿಯಿಂದ ಮುಂದುವರಿಸಿ ಆದಷ್ಟು ಜಾಗ್ರತೆ ಪ್ರತಿಫಲ ದೊರೆಯುವುದಕ್ಕೆ ಯಾವ ಏರ್ಪಾಡೂ ಮಾಡುತ್ತಿಲ್ಲ.

ಪಾನನಿರೋಧದ ವಿಚಾರವನ್ನು ಬಹಳ ಶೋಚನೀಯವಾದ ಸ್ಥಿತಿಗೆ ತಂದಿದ್ದಾರೆ. ಹಿಂದಕ್ಕೆ ಹೋಗುವುದಿಲ್ಲ, ಮುಂದಕ್ಕೂ ಬರುವುದಿಲ್ಲ. ಒಂದು ಸಂದಿಗ್ಧಪರಿಸ್ಥಿತಿಗೆ ತಂದು ಬಿಟ್ಟಿದ್ದಾರೆ. ಖಂಡಿತವಾಗಿಯೂ ಜಾರಿಗೆ ತರುವುದಾದರೆ ವರ್ಷಕ್ಕೆ ಇಷ್ಟು ಎಂದು ಮಾಡಿದ್ದರೆ ಸ್ವಲ್ಪ ಮಾದರೂ ನಂಬಿಕೆ ಬರುತ್ತಿತ್ತು. ಅದನ್ನು ಬಿಟ್ಟು ಹೀಗೆ ಕೆಲವು ಕಾಲ ಸುಮ್ಮನಿದ್ದು ಮುಂದುವರಿಸದಿದ್ದರೆ ಜನರಿಗೆ ಅನುಮಾನಕ್ಕೆ ಆಸ್ಪದವಾಗುತ್ತದೆ. ಒಂದು ವೇಳೆ ಪಾನ ನಿರೋಧ ಮಾಡಲು ಇಷ್ಟವಿಲ್ಲದಿದ್ದರೆ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಒಪ್ಪಿಕೊಳ್ಳಬಹುದಾಗಿತ್ತು. ಈ ಎರಡು ಮಾರ್ಗಗಳನ್ನೂ ಬಿಟ್ಟರುವುದರಿಂದ ದುರ್ವ್ಯಾಪಾರಕ್ಕೆ ಎಡೆಯಾಗಿದೆ. ಇದು ಬಹಳ ಶೋಚನೀಯವಾಗಿದೆ.

ಶ್ರೀ ಕೆ. ಪುಟ್ಟಸ್ವಾಮಿಯವರು (ಮಂಡ್ಯ ಜಿಲ್ಲೆ).—I rise to a point of order, Sir, ದುರ್ವ್ಯಾಪಾರ ಎಂದು ಹೇಳುವುದು ಸರಿಯಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಕಳ್ಳ ಬಟ್ಟಿ ಇಳಿಸುವುದು ಹೆಚ್ಚಿದೆ ಎಂಬ ಅರ್ಥದಲ್ಲಿ ಹಾಗೆ ಹೇಳಿದೆ, ಅಷ್ಟೆ. ಅನೀತಿಯು ಹೆಚ್ಚುವುದಕ್ಕೆ ಅವಕಾಶವಾಗಿದೆ. ನಮ್ಮ ಜಿಲ್ಲೆ ಪಕ್ಕದಲ್ಲಿ ಒಂದು ಹೆಂಡದ ಅಂಗಡಿಯಿದೆ. ಅಲ್ಲಿ ದಿನವೂ ಪೋಲೀಸಿನವರು ಕಾದಿರುತ್ತಾರೆ. ನಮ್ಮ ಜಿಲ್ಲೆಯವರು ಯಾರಾದರೂ ಕುಡಿದು ಈಚೆಗೆ ಬಂದರೆ ಅವರನ್ನು ತಡೆದು ಬಾಯಿತೆಗೆಸಿ ವಾಸನೆ ನೋಡುತ್ತಾರೆ. ಆಮೇಲೆ ಅವರ ಮೇಲೆ ಆಪಾದನೆ ಮಾಡಿ ನಾಲ್ಕಾಣೆ ಕಿತ್ತುಕೊಳ್ಳುತ್ತಾರೆ. ಹೀಗೆ ಪೋಲೀಸಿನವರು ಕೆಲವು ದಿವಸ ಗಸ್ತಾಚೆ ಮಾಡಿದಮೇಲೆ ಒಂದುದಿನ 20–30 ಜನ ಕುಡುಕರು ಪೋಲೀಸಿನವರ ಮೇಲೆ ಬಿದ್ದು ಹೊಡೆದಾಡಿದರು. ಕೂಡಲೆ ಪೋಲೀಸಿನವರು ಆ 20—30 ಜನರನ್ನು ಅರೆಸ್ಟ್ ಮಾಡಿದರು. ಈಗ ಹೀಗೆ ನಿತ್ಯವೂ ನಡೆಯುತ್ತಿದೆ. ತುಮಕೂರು ಜಿಲ್ಲೆಯಲ್ಲಿ ಹೀಗೆ ನಡೆಯುತ್ತಿದೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಪಾನ ನಿರೋಧ ಒಳ್ಳೆಯದೋ ಅಥವಾ ಕೆಟ್ಟದ್ದೋ? ನಿಮ್ಮ ಅಭಿಪ್ರಾಯವೇನು?

ಶ್ರೀ ಬಿ. ಹುಚ್ಚೇಗೌಡರು.—ಒಳ್ಳೆಯದು ಎಂದು ನಾನು ಹೇಳುತ್ತೇನೆ. ಮದ್ರಾಸು ಮತ್ತು ಬೊಂಬಾಯಿ ಪ್ರಾಂತಗಳಲ್ಲಿ ಈ ದಿವಸ ಪಾನನಿರೋಧದ ವಿಚಾರದಲ್ಲಿ ಅಲ್ಲಿನ ಮಂತ್ರಿಮಂಡಲದವರು ಯಾವ ನೀತಿಯನ್ನು ಅನುಸರಿಸುತ್ತಿದ್ದಾರೆಂಬುದನ್ನು ನೋಡಬಹುದು. ಅದರಂತೆ ಇಲ್ಲೂ ಏಕೆ ಮಾಡಬಾರದು? ಬೇಕಾದ್ದಕ್ಕೆ ಅಲ್ಲಿನ ಮೇಲುಪಂಕ್ತಿಯನ್ನು ನೋಡುವುದು ಬೇಡವಾದ್ದಕ್ಕೆ ಬಿಡುವುದು ನಮ್ಮ ಸರ್ಕಾರದ ನೀತಿಯಾಗಿದೆ. ಬೊಂಬಾಯಿನಲ್ಲಿ ಒಂದು ಸಮಿತಿಮಾಡಿ ಪರಿಶೀಲಿಸಿದ್ದಾರೆ. ಪೂರ್ಣವಾಗಿ ಜಾರಿಗೆ ತರುವುದನ್ನು ಒಪ್ಪಿದ್ದಾರೆ. ಅವರು ಪಾನನಿರೋಧ ಜಾರಿ ಮಾಡಿ ಇಂದು ಕೃತಕೃತ್ಯರಾಗಿದ್ದಾರೆ. ಮದ್ರಾಸಿನಲ್ಲೂ ಕೂಡ ಒಂದು ಸಮಿತಿಮಾಡಿ ಪಾನನಿರೋಧದಲ್ಲಿ ಯಾರಿಗೆ ಪೂರ್ಣ ನಂಬಿಕೆಯಿದೆಯೋ ಅವರನ್ನೇ ಆ ಸಮಿತಿ ಸದಸ್ಯರನ್ನಾಗಿ ಮಾಡಿ ಒಪ್ಪಿಗೆ ಪಡೆದು ಅಲ್ಲೂ ಪೂರ್ಣವಾಗಿ ಜಾರಿ ಮಾಡಿದರು. ಆದ್ದರಿಂದ ನಮ್ಮ ದೇಶದಲ್ಲೂ ಒಂದು ನೂಕ್ತವಾದ ನೀತಿಯನ್ನು ಕಡ್ಡಾಯವಾಗಿ ಅನುಸರಿಸಬೇಕು. ಎಷ್ಟೋ ಕಾಲದಿಂದ ಈ ಸಮಸ್ಯೆಯು ದೇಶದ ಮುಂದಿದೆ. ಎಷ್ಟೋ ಜನರು ಅಭಿಪ್ರಾಯವನ್ನು ಕೊಟ್ಟಿದ್ದಾರೆ. ತಮ್ಮ ಕೈಲಿ ಸಾಧ್ಯವಿಲ್ಲದಿದ್ದರೆ ಬಿಟ್ಟು ಬಿಡಬಹುದು. ಅದು ಬಿಟ್ಟು ಮಾತೆತ್ತಿದರೆ ಒಂದು ಸಮಿತಿ ಮಾಡುವುದು ಸರಿಯಲ್ಲ.

ಅಧ್ಯಕ್ಷರು.—ಅದಕ್ಕೆ ಸಮಿತಿ ಮಾಡಿಲ್ಲವಲ್ಲ.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸಮಿತಿಯಾಗುವುದಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ಬಿ. ಹುಚ್ಚೇಗೌಡರು.—ಯಾವುದಾದರೂ ಒಂದು ನಿರ್ದಿಷ್ಟವಾದ ನೀತಿಯನ್ನು ಅನುಸರಿಸುತ್ತಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ.

ಆಮೇಲೆ ಮಾನ್ಯ ಮಂತ್ರಿಗಳಿಗೆ ಕಾರು ಬದಲಾಯಿಸುವುದಕ್ಕೆ ಹಣ ಬೇಕು ಎಂದು ಹೇಳುವುದು ಸರಿಯಲ್ಲ. ಈಗಿನ ಮಂತ್ರಿಗಳ ಅವಧಿ ಇನ್ನು ಸ್ವಲ್ಪ ದಿವಸಗಳವರೆಗೆ ಮಾತ್ರ ಇರುತ್ತದೆ. ಈಗ ಮಾನ್ಯ ಮಂತ್ರಿಗಳು ಅವರಲ್ಲಿರುವ ಕಾರುಗಳನ್ನೇ ಉಪಯೋಗಿಸಿ ಮುಂದೆ ಬರುವಷ್ಟರಿಗೆ ಹೊಸ ಕಾರುಗಳು ಸಿಕ್ಕುವುದಕ್ಕೆ ಅವಕಾಶ ಕಲ್ಪಿಸಲಿ.

ಅಧ್ಯಕ್ಷರು.—ಈಗ ಹಣ ಕೊಟ್ಟರೂ ಈ ಮಂತ್ರಿಗಳೇ ಕಾರು ತೆಗೆದುಕೊಳ್ಳುತ್ತಾರೆಂದು ಹೇಗೆ ಹೇಳುತ್ತೀರಿ? ನವೆಂಬರು ಅಥವಾ ಡಿಸೆಂಬರಿನಲ್ಲಿ ಚುನಾವಣೆ ಯಾಗುತ್ತದೆ. ಈ ಹಣ ಮಾರ್ಚಿಯವರೆಗೂ ಇರುವುದರಿಂದ ಮುಂದೆ ಬರುವವರು ತೆಗೆದುಕೊಳ್ಳಬಹುದು.

ಶ್ರೀ ಬಿ. ಹುಚ್ಚೇಗೌಡರು.—ಈ ಮಂತ್ರಿಮಂಡಲ ಒಂದುಸಾರಿ ಕಾರುಗಳಿಗೆ ಹಣ ಚೆಲ್ಲಿದೆ. ಆದ್ದರಿಂದ ಮತ್ತೊಂದು ಸಲ ಈ ಮಂತ್ರಿಗಳು ಇರುವವರೆಗೆ ಕಾರುಗಳಿಗೆ ಹಣ ತೆರುವುದು ಬೇಡ.

ಆಮೇಲೆ ದೇಶದಲ್ಲಿ ಹೆಚ್ಚು ಆಹಾರ ಬೆಳೆಯುವುದಕ್ಕಾಗಿ ಕೊಡುವ ಕೆಲವು ಗ್ರಾಂಟುಗಳು ಮುಂತಾದ ಸಹಾಯವು ಏನೂ ಪ್ರಯೋಜನಕಾರಿಯಾಗಿಲ್ಲ ಎಂದು ಹೇಳಬೇಕಾಗಿದೆ. ನಿಜವಾಗಿಯೂ ಸಹಾಯ ಮಾಡುವ ರೀತಿಯೇ ಬೇರೆ. ಯಾರು ಮುಖಂಡರೋ ಮತ್ತು ಯಾರು ಅನುಕೂಲಸ್ಥರೋ ಅವರಿಗೇ ಈ ಸಹಾಯವೆಲ್ಲಾ ಆಗುತ್ತಿದೆಯೇ ಹೊರತು ನಿಜವಾಗಿ ಅಪೇಕ್ಷೆ ಮಾಡುವ ಇತರ ಉತ್ಸಾಹಶಾಲಿಗಳಿಗೆ ಸರ್ಕಾರದ ಸಹಾಯ ಒದಗುತ್ತಿಲ್ಲ. ಕಷ್ಟಪಟ್ಟು ಕೆಲಸವಾಡುವವರು ಕೇಳುವಾಗ ಹಣವೇ ಇರುವುದಿಲ್ಲ.

ಪೊನ್ನೆ ಹೇಳಿದಂತೆ ಗ್ರಾಮ ಕೈಗಾರಿಕೆಗಳಿಗೆ ಸ್ವಲ್ಪ ಹಣ ಸಹಾಯವಾಗಿದೆ. ಆದರೆ ಅದು ಸಾಲದು. ಎಷ್ಟೋ ಜನರು ತಾವೂ ಸ್ವಲ್ಪ ಬಂಡವಾಳಹಾಕಿ ಅದರ ಜೊತೆಗೆ ಕೊಂಚ ಸಹಾಯವಾಡಿ ಎಂದು ಕೇಳಿದರೆ ಹಣವಿಲ್ಲವೆಂದು ಹೇಳುವ ಸ್ಥಿತಿ ಬಂದಿದೆ. ಯಾರು ಬೇಕಾದಷ್ಟು ಕಷ್ಟಪಟ್ಟು ಕೆಲಸ ಮಾಡುತ್ತಾರೋ ಅವರಿಗೆ ಸಾಕಷ್ಟು ಉತ್ತೇಜನವಿಲ್ಲ. ಯಾರಿಗೆ ಮಂತ್ರಿಮಂಡಳದ ಮೇಲೆ ಪ್ರಭಾವ ಬೀರುವ ಶಕ್ತಿ ಇದೆಯೋ ಅವರಿಗೆ ಬೇಕಾದ ಹಣ ಸಹಾಯ ಸಿಗುತ್ತದೆ. ಆದ್ದರಿಂದ ಇದನ್ನು ಯೋಚನೆಮಾಡಿ ಯಾರಿಗೆ ಯಾವರೀತಿ ಪ್ರೋತ್ಸಾಹ ಕೊಡಬೇಕು ಎಂಬುದನ್ನು ಪರಿಶೀಲಿಸಿ ಯಾರು ತಾವಾಗಿಯೇ ಕಷ್ಟಪಟ್ಟು ಆಸಕ್ತಿವಹಿಸಿ ಕೆಲಸ ಮಾಡುತ್ತಾರೋ ಅವರು ಒಂದು ಹೆಜ್ಜೆ ಮುಂದೆ ಹೋಗುವುದಕ್ಕೆ ಸಹಾಯ ಮಾಡಬೇಕೇ ಹೊರತು ಉಳಿದವರಿಗೆ ಸಹಾಯ ಮಾಡುವುದು ಸರಿಯಲ್ಲ. ಆಹಾರ ಸಮಸ್ಯೆ ವಿಚಾರದಲ್ಲಿ ಹೇಳುವುದಾದರೆ ಎಲ್ಲಯವರೆಗೆ ಹತೋಟಿಯಿರುತ್ತದೆಯೋ ಅಲ್ಲಿಯವರೆಗೆ ಹೆಚ್ಚು ಬೆಳೆ ಬೆಳೆಯುವುದಕ್ಕೆ ಖಂಡಿತ ಸಾಧ್ಯವಿಲ್ಲ. ಈಸಾರಿ ಈ ಸಭೆಯ ಅಭಿಪ್ರಾಯ ಕೂಡ ಹತೋಟಿ ಹೋಗಬೇಕೆಂಬುದೇ ಆಗಿದೆ. ಎಲ್ಲರೂ ಹತೋಟಿಯನ್ನು ವಿರೋಧಿಸಿದ್ದಾರೆ. ಈ ಹತೋಟಿ ವ್ಯವಸ್ಥೆಯೂ ಕೂಡ ದಿವಸ ದಿವಸಕ್ಕೂ ಸಡಿಲವಾಗುತ್ತಿದೆ. ಯಾವ ರೀತಿಯಲ್ಲಿ ಪ್ರಕಾರ ಉತ್ಪತ್ತಿ ಬರುತ್ತದೆ ಎಂದು ಹೇಳುವುದಕ್ಕೆ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಅನೇಕ ರೈತರು ಕಷ್ಟಪಟ್ಟು ಆಹಾರ ಪದಾರ್ಥಗಳನ್ನು ಬೆಳೆಯುವುದು ತಪ್ಪು, ಅದರಿಂದ ಜೈಲಿಗೆ ಹೋಗಬೇಕಾಗಿದೆ, ದಂಡ ಕೊಡಬೇಕಾಗಿದೆ ಎಂಬ ಕಾರಣದಿಂದ ಬೆಳೆಯುವುದನ್ನೇ ಬಿಡುತ್ತಾ ಬಂದಿದ್ದಾರೆ. ನಿಜವಾಗಿಯೂ ನಮ್ಮ ರೈತರು ಯಾವ ವಿಚಾರದಲ್ಲೂ ಪ್ರಗತಿಯನ್ನು ಅರ್ಧ ಭಾಗದಷ್ಟಾದರೂ ಪಡೆದಿಲ್ಲ. ಒಂದು ಕೆಲಸ ಮಾಡುವುದಕ್ಕೂ ಸಾಕಾದಷ್ಟು ಜ್ಞಾನವಿಲ್ಲ. ಅಲ್ಲದೆ ಹಣದ ಅಭಾವದಿಂದ ಶಕ್ತಿಯಿಲ್ಲದೇಯಿರುವಾಗ ಫಸಲನ್ನು ಕೊಯ್ಯುವಾಗ, ಒಕ್ಕುವಾಗ ಮತ್ತು ಸಾಗಿಸುವಾಗ ತೊಂದರೆ ಮಾಡುತ್ತಿದ್ದಾರೆ. ಒಂದುಪಲ್ಲ ರಾಗಿ ಸರ್ಕಾರ ವಶಪಡಿಸಿಕೊಂಡು ಹಣ ಕೊಡಬೇಕಾದರೆ 15–20 ದಿವಸಗಳು ತಿರುಗಬೇಕು. ಇಂಥ ಉದಾಹರಣೆಗಳು ಸಾವಿರಾರು ಇವೆ. ಕಛೇರಿಗೆ ಹೋದರೆ ಅಲ್ಲರುವ 20 ಜನರಲ್ಲಿ ಯಾರನ್ನು ಕಾಣಬೇಕೋ ಗೊತ್ತಾಗುವುದಿಲ್ಲ. ಅವರಲ್ಲಾರನ್ನು ಕೇಳಿದರೆ ಶೇಕದಾರರು ಬರಬೇಕೆಂದು ಹೇಳುತ್ತಾರೆ. ಶೇಕದಾರರನ್ನು ಕೇಳಿದರೆ ಅವರೊಂದು

ನೆಪಹೇಳುತ್ತಾರೆ. ಒಂದುಸಲ ದಾವಣಗೆರೆಯಿಂದ 40 ಸೇರು ಧಾನ್ಯ ತರಬೇಕಾದ್ದಕ್ಕೆ ಅವಕಾಶ ಕೊಟ್ಟಿದ್ದರು. ಆಗ್ಯೆ ಬೇಕಾದಷ್ಟು ಧಾನ್ಯ ಕಂಟ್ರೋಲ್ ಬೆಲೆಗಿಂತ ಕಡಿಮೆಗೆ ದೊರೆಯುತ್ತಿತ್ತು. ಆದರೆ ಅಲ್ಲಿಂದ ತಂದರೆ ಹೊರಗಡೆ ದೊರೆಯುವ ಬೆಲೆಗಿಂತ ಹೆಚ್ಚು ಖರ್ಚಾಯಿತು.

ಸರ್ಕಾರಿ ಕಚೇರಿಗಳಿಗೆ ಹೋಗಿ, ದಿನವಹಿ ತಿರುಗಬೇಕೆಂದರೆ ಖಂಡಿತ ರೈತನಿಂದ ಸಾಧ್ಯವಿಲ್ಲ. ಇದನ್ನು ತಪ್ಪಿಸುವುದಕ್ಕೆ ಅವನ ಮನೆ ಬಾಗಿಲಿಗೇ ಹೋಗಿ ಮಾಲು ತೆಗೆದುಕೊಂಡು ಅವನಿಗೆ ಹಣ ಕೊಡಿ ಎಂದರೆ ಸರ್ಕಾರದವರು ಇದುವರೆಗೂ ಸಹಾನುಭೂತಿ ತೋರಿಸದೆ ಪರಿಸ್ಥಿತಿ ಬಹಳ ಕಠಿಣವಾಗಿದೆ. ರೈತನ ವಿಚಾರದಲ್ಲಿ ಅವರಿಗೆ ಕನಿಕರ ಇಲ್ಲ. ಹತ್ತೋಟಿ, ನಿರ್ಬಂಧ ಮಗ್ಗೈರೆ ಎಲ್ಲಿಯವರೆಗೆ ಹೋಗುವುದಿಲ್ಲವೋ ಅಲ್ಲಿಯವರೆಗೆ ಯಾವ ಅನುಕೂಲವೂ ಆಗುವುದಿಲ್ಲ. ಹೊರದೇಶಗಳಿಗೆ ಹೋಗತಕ್ಕ ಮಾಲುಗಳ ಮೇಲೆ ಹತ್ತೋಟಿಹಾಕಿ ಆದರೆ ಬೆಳೆಯತಕ್ಕವನಿಗೆ ಇಂಥಾಕಡೆಯೇ ಬೆಳೆಯಬೇಕು, ಇಂಥಾಕಡೆಯೇ ಹಾಕಬೇಕು ಎಂದು ಕಡ್ಡಾಯ ಮಾಡುವುದು ಇದೆಯಾ ಸರಿಯಿಲ್ಲ. ಎತ್ತು ಗಾಡಿ. ಇಲ್ಲದೇ ಇದ್ದರೆ ಅವನು ಏನು ಮಾಡಬೇಕು? ಗುಳ ಇಲ್ಲದೇ ಇದ್ದರೆ ಏನು ಮಾಡಬೇಕು? ಅವನಿಗೆ ಬೇಕಾದ ಯಾವುದಾದರೂ ಸಾಮಾನು, ಗುದ್ದಲಿ, ಗುಳ ಮಗ್ಗೈರೆ ಬೇಕೆಂದರೆ ಎರಡು, ಮೂರು ತಿಂಗಳಾದರೂ ಸಿಕ್ಕುವುದಿಲ್ಲ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಈಗ ತಾನೆ ಗುಳ ಬೇಕಾದ ಹಾಗೆ ಸಿಕ್ಕುತ್ತದೆ ಎಂದು ಹೇಳಿದರು!

ಶ್ರೀ ಬಿ. ಹುಚ್ಚೇಗೌಡರು.—ಇಂಥಾ ಅನಿವಾರ್ಯವಾದ ಪದಾರ್ಥಗಳು ದೊರಕುವಂತೆ ಮಾಡಿದ ಹೊರತು ರೈತರಿಗೆ ಯಾವ ಸಹಾಯವೂ ಆಗುವುದಿಲ್ಲ. ಇದರಿಂದ ಅನರ್ಥಗಳು ಹೆಚ್ಚಾಗುತ್ತವೆ, ಆರ್ಥಿತಿ ಆಗದಂತೆ ಸರಿಯಾಗಿ ನೋಡಿಕೊಳ್ಳಬೇಕೆಂದು ಹೇಳುತ್ತೇನೆ.

Sri G. A. ACHARYA (Bangalore District—General).—I would like to be enlightened whether the interest paid to the Insurance Department comes under the heading 10 so thatI may refer to it and offer my constructive suggestions.

The Hon'ble Sri H. C. DASAPPA.—At this stage?

Sri G. A. ACHARYA.—Nothing wrong. The Hon'ble Minister has heard what the Hon'ble Speaker said that we should not repeat what has already been said. I am going to say something new.

The Hon'ble Sri H. C. DASAPPA.—Let the Hon'ble Member offer his remarks.

Sri G. A. ACHARYA.—The interest on Savings Certificates that are being issued in the State of Mysore is very much less compared to the interest on those issued by the Central Government. After all everybody wants interest. Those that have money would like to put money into the hands of the Government provided that as much of interest as others pay is paid here. Otherwise, Mysore capital will be flowing elsewhere. It is not that I am holding a brief for those who have money. There must be saving habit. As a matter of fact where citizens do not trust the Government, that Government cannot stand at all. It is from that stand point and not merely from the point of view of interest, I am saying. Take for example our Treasury Savings Certificates. Government are offering, if I rightly know, about 3½ per cent or less than that. Every one must have seen the advertisement of the Central Govenment in the newspapers for which they pay Rs. 700 or Rs. 800 and they say that they are going to pay 13½ per cent interest and that will not be added to income-tax. In the midst of the Central Government offering such high rate of interest plus two or three facilities, how at all in Mysore people pay Rs. 10 for these treasury Savings Certificates? Whenever I see each and every Minister he tells me that Government have no funds. May I tell them how much money is going out of Mysore and how many people in Mysore are purchasing those treasury Savings Certificates? I think Government have better statistics than I have. It is highly essential that we must approach the Central Government, having so many capital works on hand and impress upon them that the State should be permitted to pay higher rate of interest to compensate income-tax. I ask why there is so much delay? It is already two months since cash certificates were issued. At least one lakh of rupees must have gone from the citizens of Mysore.

So far as fundamental research in our University is concerned, I have not read any paper on fundamental research, we are paying heavy amounts to the University. I want the Hon'ble Minister who is very ambitious to industrialise Mysore, to pay particular attention to research in electrical equipment or radio. I think it is highly necessary that in the next year's Budget he should

Sri B. HUTCHE GOWDA.—Though not legally, are they not morally binding?

ಶ್ರೀ ಎಂ. ಮಾದಯ್ಯನವರು.—"The directive principles shall not be enforceable by any Court" ಎಂದಿದೆ. ಆದರೆ ಆಡಳಿತ ನಡೆಸುವವರ ಮೇಲೆ moral binding ಇದೆ, ಅವರು ಪ್ರಯತ್ನ ಮಾಡಬೇಕು ಎಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಈರೀತಿ ಮಾಡಿದ್ದೇವೆ, ಇಷ್ಟು ಇದಕ್ಕೆ ಖರ್ಚಾಗುತ್ತದೆ ಎಂದು ಅವರು ಹೇಳಲ್ಲ. ಇದಕ್ಕೆ ಹಣ ಬೇಕಾದರೆ ಈ ಸಭೆಯ ಸದಸ್ಯರು ಸಲಹೆ ಹೇಳಬಹುದು. ಬೇರೆ ಪ್ರತಿಯೊಂದು ವಿಚಾರಕ್ಕೂ ರಾಜ್ಯಾಂಗದ ಆರ್ಟಿಕಲ್ ಕೋಟ್ ಮಾಡುತ್ತಾರೆ. ಅಪ್ರೊಪ್ರಿಯೇಷನ್ ಬಿಲ್ಲು ಬಗ್ಗೆರೆ ಬಿಲ್ಲುಗಳನ್ನು ತರಬೇಕಾದಾಗ ಆರ್ಟಿಕಲ್ ಕೋಟ್ ಮಾಡುತ್ತಾರೆ, ಆದರೆ ಈ ವಿಷಯದಲ್ಲಿ ಈ ಆರ್ಟಿಕಲ್ ಕಡೆ ಸದಸ್ಯರ ಗಮನವನ್ನು ಸೆಳೆಯುವುದಿಲ್ಲ! ಈ ವಿಚಾರವನ್ನು ತೀವ್ರವಾಗಿ ಆಲೋಚನೆ ಮಾಡಿ. ಇದಕ್ಕೆ ಕೋಟಿಗಟ್ಟಲೆ ಹಣ ಬೇಕಾಗುತ್ತದೆಂದು ಹೇಳಿದರೆ, ಅದಕ್ಕೆ ಏನಾದರೂ ಮಾರ್ಗವನ್ನು ಮಾನ್ಯ ಸಭಾ ಸದಸ್ಯರು ಹೇಳಬಹುದು. ಈ ವಿಚಾರದಲ್ಲಿ ತೀವ್ರ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಒತ್ತಾಯವಾಗಿ ಹೇಳುತ್ತೇನೆ.....

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು.—ವಿದ್ಯಾಭ್ಯಾಸ ಕ್ರಮವೇ ಬದಲಾವಣೆಯಾಗುತ್ತದೆ!

ಶ್ರೀ ಎಂ. ಮಾದಯ್ಯನವರು.—ಕ್ರಮವೇ ಬದಲಾವಣೆ ಆದರೆ ಅದನ್ನೂ ಹೇಳಲಿ.

ಇನ್ನು ಪಬ್ಲಿಕ್ ಹೆಲ್ತ್ ಮತ್ತು ಮೆಡಿಕಲ್ ಬಾಬುಗಳಿಗೆ ಹಣವನ್ನು ಹೆಚ್ಚಿಸಿದ್ದಾರೆ. ಆದರೆ ಪ್ರಶ್ನೋತ್ತರಗಳ ಕಾಲದಲ್ಲಿ ವ್ಯಕ್ತಪಟ್ಟಂತೆ 'ರೆಫ್ರೊಸಿ'ಯ ನಿವಾರಣೆ ವಿಚಾರದಲ್ಲಿ ತೀವ್ರ ಕಾರ್ಯಕ್ರಮವನ್ನು ಸರ್ಕಾರದವರು ಯೋಚನೆ ಮಾಡಿಲ್ಲ. ಈ ರೋಗ ಜನಗಳಲ್ಲಿ ಪ್ರಬಲವಾಗಿ ಹರಡುತ್ತಿದೆ. ಇದು ಬಹಳ ಅಪಾಯಕರವಾದುದು. ಇದು ಸಮಾಜಕ್ಕೆ ದೊಡ್ಡ ಕೊಡಲಿ ಪೆಟ್ಟು. ಆಹಾರವಿಲ್ಲದಿದ್ದರೂ ಚಿಂತೆಯಿಲ್ಲ, ಬಟ್ಟೆಯಿಲ್ಲದಿದ್ದರೂ ಚಿಂತೆಯಿಲ್ಲ, ಇದು ಎಲ್ಲಕ್ಕಿಂತ ಮುಖ್ಯವಾದುದು. ಇದನ್ನು ಹೇಳಿದರೆ ಕ್ಲಿನಿಕ್ಸ್ ಇಟ್ಟು ಔಷಧ ಕೊಟ್ಟು ಕಳುಹಿಸುತ್ತೇವೆಂದು ಹೇಳುತ್ತಾರೆ. ಔಷಧ ತೆಗೆದುಕೊಂಡು ಹೋಗಿ ಈ ರೋಗಿಗಳು ಗಂಡಹೆಂಡಿರು, ತಂದೆ ತಾಯಿಗಳ ಮಧ್ಯದಲ್ಲಿ, ಜನರ ಮಧ್ಯದಲ್ಲಿ ವಾಸ ಮಾಡುತ್ತಾರೆ. ಒಂದೆರಡು ದಿನ ಔಷಧಿ ತೆಗೆದುಕೊಂಡರೆ ಆಯಿತೆ? ರಾತ್ರಿ ಕಾಲದಲ್ಲಿ ಮಲಗಿದಾಗ ಈ ರೋಗ ಹೆಚ್ಚು ಹರಡತ್ತದೆಂದು ಹೇಳುತ್ತಾರೆ. ಈ ವಿಚಾರದಲ್ಲಿ 1942ನೆಯ ಇನವಿಯಲ್ಲೇ ತೀವ್ರವಾಗಿ ಒತ್ತಾಯಮಾಡಿದಾಗ ಮೈಸೂರು ಡಿಸ್ಟ್ರಿಕ್ಟಿಗೆ ಸರ್ಕಾರದವರು ಆಗಲಕ್ಷ ರೂಪಾಯಿನ ಒಂದು ಅಂದಾಜು ತಯಾರುಮಾಡಿ ಚಾಮರಾಜನಗರದಲ್ಲಿಯೂ ಇನ್ನೊಂದು ಕಡೆಯೂ ಲೆಪರ್ ಅಸೈಲಮ್ ಕಟ್ಟಿ ಅಲ್ಲಿಗೆ ಈ ರೋಗಿಗಳನ್ನು ತೆಗೆದುಕೊಂಡು ಹೋಗಿ ಚಿಕಿತ್ಸೆ ಮಾಡಲು ಏರ್ಪಾಡಾಗಿತ್ತು. ಆದರೆ ಆದರ ವಿಚಾರದಲ್ಲಿ ಸರ್ಕಾರದವರು ಏಗಾ ಕೊಟ್ಟಿಲ್ಲ. ಎಲ್ಲಕ್ಕಿಂತಲೂ ಇದು ಪ್ರಾಮುಖ್ಯವಾದ ವಿಚಾರ. ಸರ್ಕಾರದವರು ಕೂಡಲೆ ಇದಕ್ಕೆ ಮೊದಲು ಹಣವನ್ನು ಕೊಟ್ಟು ಒಂದೆರಡು ಅಸೈಲಮ್‌ಗಳನ್ನು ಮಾಡಿ ತೀವ್ರ ಕಾರ್ಯಕ್ರಮವನ್ನು ಗೊತ್ತುಮಾಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಸ್. ರಂಗರಾಮಯ್ಯರು (ಚಿತ್ರದುರ್ಗ ಜಿಲ್ಲೆ).—ಸ್ವಾಮಿ, ಶ್ರೀವರ್ಮಾ ಜಿ. ಎ. ಆಚಾರ್ಯರು ಮೈಸೂರು ಸರ್ಕಾರದ ಇಷ್ಯೂರೆನ್ಸ್ ಇಲಾಖೆಯ ವಿಚಾರ ಹೇಳಿದರು.....

ಶ್ರೀ ಜಿ. ಎ. ಆಚಾರ್ಯರು.—ಸರ್ಕಾರ ಕೊಡತಕ್ಕ ಬಡ್ಡಿಯ ವಿಚಾರದಲ್ಲಿ ಮಾತನಾಡಿದೆ, ಅಷ್ಟೆ.

ಶ್ರೀ ಎಸ್. ರಂಗರಾಯರು.—ಇಷ್ಯೂರೆನ್ಸ್ ಇಲಾಖೆಯ ವಿಚಾರದಲ್ಲಿ ನಾನೊಂದು ಜ್ಞೋತಾ ಸೂಚನೆಯನ್ನು ಕಳುಹಿಸಿದ್ದೆ. ಆದರೆಮಾತನಾಡಲು ಅವಕಾಶವಾಗಲಿಲ್ಲ; ಮೈಸೂರು ಇಷ್ಯೂರೆನ್ಸ್ ಇಲಾಖೆ ಸರಿಯಾಗಿ ಕೆಲಸಮಾಡುತ್ತಿಲ್ಲವೆಂದು ಬಹಳ ವಿಷಾದದ್ದಿಂದ ಹೇಳಬೇಕಾಗಿದೆ. ಈ ಇಲಾಖೆಯವರು ಪಾಲಸಿದಾರರು ಕಟ್ಟತಕ್ಕ ಕಂತುಗಳಿಗೆ ರಶೀದಿಗಳನ್ನು ಕಳುಹಿಸುವುದಿಲ್ಲವೆಂದು ಹೇಳಿದರು.....

ಶ್ರೀ ಎಚ್. ಕೆ. ವೀರಣ್ಣಗೌಡರು.—ಡಿಪ್ಯಾಂಡ್ ನೋಟೀಸ್ ಸರಿಯಾಗಿ ಕಳುಹಿಸುವುದಿಲ್ಲವೆಂದು ಹೇಳಿದೆ.

ಶ್ರೀ ಎಸ್. ರಂಗರಾಮಯ್ಯರು.—ಕಂತುಗಳನ್ನು ಸಕಾಲದಲ್ಲಿ ಪಾವತಿ ಮಾಡದೇಯಿದ್ದರೆ ಪಾಲಸಿ ರದ್ದಾಗಿದೆಯೆಂದು ನೋಟೀಸ್ (Lapse Notice) ಕೊಡುವುದಿಲ್ಲ, ನಾವು ಸಾಲಕ್ಕೆ ಅರ್ಜಿ ಹಾಕಿದರೆ ನಮ್ಮ ಪಾಲಸಿ ಎರಡು ವರ್ಷಗಳ ಹಿಂದೆ ಲ್ಯಾಪ್ಸ್ ಆಗಿದೆ ಎಂದು ಹೇಳುತ್ತಾರೆ. ಈಗ ನಾವು ಇಂತಿಂಥಾ ದಿನ ಕಂತುಗಳನ್ನು, ಕೊಟ್ಟಿದ್ದೇವೆಂದು ತಿಳಿಸಿದರೆ, ಅದಕ್ಕೆ ದಾಖಲೆ ಕಳುಹಿಸಿ ಎಂದು ನಮ್ಮನ್ನೇ ಕೇಳುತ್ತಾರೆ. ಇದನ್ನೆಲ್ಲಾ ನೋಡಿದರೆ ಅವರು ಸರಿಯಾದ ದಾಖಲೆ ಇಟ್ಟಿದ್ದಾರೆಯೋ ಇಲ್ಲವೋ ಎಂದು ಅನುಮಾನ ಬರುತ್ತದೆ. ಪಾಲಸಿಯ ಅವಧಿ ಮುಗಿದನಂತರ ನಮಗೆ ಹಣ ಪಾವತಿ ಮಾಡಬೇಕೆಂದು ಅರ್ಜಿಹಾಕಿದರೆ, ಎರಡು ವರ್ಷದ ಹಿಂದೆಯೇ ಪಾಲಸಿ ಲ್ಯಾಪ್ಸ್ ಆಗಿದೆ ಎಂದು ತಿಳಿಸುತ್ತಾರೆ. ನನಗೆ ಇದರಲ್ಲಿ ಅನುಭವವಿದೆಯೆಂದು ಒಬ್ಬರು ಪಾಲಸಿದಾರರು ಇಂತಹ ಒಂದನ್ನು ತೋರಿಸಿ ದಯವಿಟ್ಟು ಏನುಮಾಡಬೇಕೆಂಬುದನ್ನು ತಿಳಿಸಿ ಎಂದು ಕೇಳಿದರು. ಆಮೇಲೆ ನಾನು ಪತ್ರವ್ಯವಹಾರ ನಡೆಸಿದೆ, ಅದಕ್ಕೆ ಪಾಲಸಿ ಎರಡು ವರ್ಷದ ಹಿಂದೆ ಲ್ಯಾಪ್ಸ್ ಆಗಿದೆ ಎಂದು ಜವಾಬು ಕೊಟ್ಟರು. ಕಂತು ಕೊಟ್ಟುವುದು ಸ್ವಲ್ಪ ತಡವಾಗಿತ್ತು. ಆದಾದ ಮೇಲೆ ಪ್ರತಿತಿಂಗಳೂ ವಾಯಿದೆಯೊಳಗೇ ಕಟ್ಟಿದ್ದಾರೆ. ಅವಧಿ ಮುಗಿದು ಪಾಲಸಿ mature ಆಗಿದ್ದರೂ ಅವರಿಗೆ ಹಣ ಪಾವತಿಯಾಗುವಂತಿರಲಿಲ್ಲ. ಇದರ ಮೇಲೆ ಬಹಳವಾಗಿ ಪತ್ರವ್ಯವಹಾರ ನಡೆಸಿ ಕೊನೆಗೆ ಎರಡು ವರ್ಷದ ಹಿಂದೆ ಪಾವತಿಯಾದ ಪೊಲಿಸಿಗೆ ಮೇಲೆಯೇ ಪಾಲಸಿ paid up ಆಗಿದೆಯೆಂದು ಭಾವಿಸಿ, ಪಾಲಸಿ ರದ್ದಾದ ಮೇಲೆ ಕಟ್ಟಿದ ಹಣವನ್ನು ಡಿವಾಜಿಟ್ ಪೊಲಿಸಿಗೆಂದು ವಜಾಕೊಂಡು ಹಣ ಕೂಡಿ ಎಂದು ಹೇಳಿದ್ದರ ಮೇರೆ ಹಣ ಕೊಟ್ಟರು. ಹೀಗೆ ಹಣ ಕೊಡುವುದಕ್ಕೆ ಡಿವ್ಯಾಂಡ್ ನೋಟೀಸ್ ಆಗಲಿ, ಕೊಟ್ಟಿದ್ದಕ್ಕೆ ರಶೀತಿಯಾಗಲೀ, ಲ್ಯಾಪ್ಸ್ ಆದರೆ ಲ್ಯಾಪ್ಸ್ ಆಯಿತೆಂದಾಗಲೀ ಅವರು ಹೇಳುತ್ತಿಲ್ಲ. ಪಾಲಸಿ ಒಪ್ಪಿಕೊಂಡು ನಮ್ಮ ಕೈಗೆ ಪಾಸ್ ಬುಕ್ ಕೊಟ್ಟುಬಿಟ್ಟರಾಯಿತು; ಅಲ್ಲಿಂದ ಮುಂದೆ ಪಾಲಸಿದಾರರಿಗೂ ಇಲಾಖೆಯವರಿಗೂ ಸಂಬಂಧವೇ ಇರುವಂತೆ ಕಾಣುವುದಿಲ್ಲ. ಕೊನೆಗೆ ಪಾಲಸಿ ಮುಗಿದ ಮೇಲೆ ಪತ್ರವ್ಯವಹಾರ ನಡೆಸುವಾಗ ಹಿಂದೆ ನಡೆದಿರುವುದೆಲ್ಲಾ ಬುಡುಲಿಗೆ ಬರುತ್ತದೆ. ಆದ್ದರಿಂದ ಈ ಇಷ್ಯೂರೆನ್ಸ್ ಇಲಾಖೆಯನ್ನು ಸರಿಯಾಗಿ ಪುನರ್ವ್ಯವಸ್ಥೆ ಮಾಡಬೇಕೆಂದು ನಾನು ಒತ್ತಾಯ ಮಾಡಿ ಹೇಳುತ್ತೇನೆ.

(SRI G. A. ACHARYA.)

provide more than what is provided this year.

I now come to interest on debt. The Hon'ble Minister once said that he is considering more from a social angle when I said that our Insurance Department was getting from our revenues 3½ per cent interest which was a very heavy rate. Compare this to the Insurance Companies all over the world which stand independently and spend on hospitals and social welfare of the State.

Sri K. PUTTASWAMY (Mandya District—General).—A time limit may be fixed for speeches, Sir.

Mr. SPEAKER.—How can I do that?

Sri G. A. ACHARYA.—It is a question of Government getting some money. Government are paying 3½ per cent interest and are guaranteeing their money. should not the Government at least get what other companies are getting? Why not the surplus profits be utilised for starting T. B. Sanatorium or building hospitals? It is not that I am against Government paying 3½ per cent interest but it is unheard of. I do not think any Insurance Company will get at 3½ per cent free of income-tax. There will be fluctuation in the investment. With certain amount of profits to Mysore Insurance Company, the Government must get something, not at the cost of the policy-holders. I do not want the policy holders to suffer. That is not my view. After paying 3½ per cent if the valuation discloses a huge surplus of as much as 17, 20 or 30 lakhs of rupees, Government must get twenty-five per cent of it or in the alternative the twenty-five per cent of the total profits arrived at by the Actuary be spent for hospital buildings or for T. B. Sanatorium or for some other item in the State of Mysore.

That is exactly what I wanted to say. I do not know, I am not certain yet, whether our Finance Minister is paying 3½ per cent. I am not very certain, I believe it is 3½ per cent. If it is lesser than that, let me be corrected so that I may know that it is just. Knowing as I do the financial crash all over India and Mysore is no exception, I would conclude saying that it is far better so far as capital expenditure is concerned to think twice before you spend. Thank you, Sir.

ಶ್ರೀ ಎಂ. ಮಾದಯ್ಯನವರು (ಮೈಸೂರು ಜಿಲ್ಲೆ—ನಿಮ್ನ ಪಂಗಡ).—ಸ್ವಾಮಿ, ನಾನು ಒಂದು ವಿಚಾರವನ್ನು ಹೇಳಬೇಕೆಂದಿದ್ದೇನೆ. 1950ನೆಯ ಜನವರಿ 26ನೆಯ ತಾರೀಖು ಬಂದ ಮೇಲೆ ನಮ್ಮ ರಾಜ್ಯಾಂಗವನ್ನು ಓದಿ ಬಹಳ ಸಂತೋಷ ಪಟ್ಟೆ. ಅದು ಭಾರತದ ಎಲ್ಲಾ ಸರ್ಕಾರಗಳ ಎಲ್ಲ ಆಡಳಿತವನ್ನೂ ರಾಜ್ಯಾಂಗದಲ್ಲಿ ಹೇಳಿರುವಂತೆ ಒಂದು ಹತೋಟಿಗೆ ತರುತ್ತದೆಂದು ತಿಳಿದಿದ್ದೆ. ಆದರೂ ರಾಜ್ಯಾಂಗದ 45ನೆಯ ಆರ್ಟಿಕಲ್ ವಿಚಾರದಲ್ಲಿ ನಮ್ಮ ಸರ್ಕಾರದವರು ಯಾವ ಕಾರ್ಯಕ್ರಮವನ್ನೂ ತೆಗೆದುಕೊಳ್ಳದೆ ತಟಸ್ಥರಾಗಿರುವುದನ್ನು ನೋಡಿ ನನಗೆ ಆಶ್ಚರ್ಯವಾಗುತ್ತಿದೆ. ನಾನು ಹೇಳುತ್ತಿರುವುದು ಬಲವಂತ ವಿದ್ಯಾಭ್ಯಾಸದ ವಿಚಾರ. ಈಗಾಗಲೇ ಎರಡು ಬಜೆಟ್ ಅಧಿವೇಶನಗಳಾಗಿವೆ. ಪ್ರಾಥಮಿಕ ವಿದ್ಯಾಭ್ಯಾಸದ ವಿಸ್ತರಣೆಯ ವಿಚಾರದಲ್ಲಿ ಎಷ್ಟೋ ಚರ್ಚೆ ನಡೆದಿದ್ದರೂ ಕೂಡ ಸರ್ಕಾರದವರು ಸಮರ್ಪಕವಾದ ಉತ್ತರ ಕೊಡಲಿಲ್ಲ. ಅವರು ಏನಾದರೂ ಈ ವಿಚಾರದಲ್ಲಿ ಅಂದರೆ ಸಂಸ್ಥಾನದಲ್ಲಿ ಬಲವಂತದ ವಿದ್ಯಾಭ್ಯಾಸವನ್ನು ಜಾರಿಗೆ ತರುವ ವಿಚಾರದಲ್ಲಿ ಸಮರ್ಪಕವಾದ ಉತ್ತರ ಹೇಳದೇಹೋದರೆ ಕರ್ತವ್ಯ ಲೋಪವೆಂದು ಕಾಣುತ್ತದೆ. They owe a duty to this House about this. ದೇಶದಲ್ಲಿ ವಿದ್ಯಾಭ್ಯಾಸಕ್ಕಾಗಿ 3 ಕೋಟಿ 76 ಲಕ್ಷ ಚಿಲ್ಲರೆ ರೂಪಾಯಿ ನಷ್ಟು ಖರ್ಚು ಮಾಡುತ್ತಾರೆ. ಇನ್ನು ಉಳಿದಿರುವ ಎಂಟು ಹಂತ್ತು ವರ್ಷ ಕಾಲದಲ್ಲಿ ಹೇಗೆ ಪ್ರಾಥಮಿಕ ವಿದ್ಯಾಭ್ಯಾಸವನ್ನು ಹೆಚ್ಚಿಸಿ ಮುಂದೆ ತರಬೇಕು, ಇದಕ್ಕೆ ತಕ್ಕಂತೆ ಮಿಡ್ಲ್ ಸ್ಕೂಲುಗಳು, ಹೈಸ್ಕೂಲುಗಳು ಮತ್ತು ಕಾರೇಜುಗಳುಗಳೆಷ್ಟನ್ನಿಡಬೇಕು ಎಂಬ ಬಗ್ಗೆ ಏನು ಪ್ರಯತ್ನಮಾಡುತ್ತಿದ್ದಾರೆ, ಸರ್ಕಾರಕ್ಕೆ ಇದು ಸಾಧ್ಯವ ಅಥವ ಅಸಾಧ್ಯವೆ, ಸರ್ಕಾರದ ನೀತಿಯೇನು, ಅಖಿಲ ಭಾರತ ನೀತಿಯೇನು ಎಂಬುದೇನನ್ನೂ ತಿಳಿಸಿಲ್ಲ. ಹತ್ತು ವರ್ಷಗಳಲ್ಲಿ ಇದನ್ನು ಒಂದು ವಿಧದಲ್ಲಿ ಜಾರಿಗೆ ತಂದೇ ತರಬೇಕೆಂದು (if the directive principles are never the less fundamental in the governance of the country) ರಾಜ್ಯಾಂಗದಲ್ಲಿ ಹೇಳಿರುವಾಗ ಇವರು ಹೀಗಿರುವುದನ್ನು ನೋಡಿ ನನಗೆ ಆಶ್ಚರ್ಯವಾಗುತ್ತಿದೆ.....

ಅಧ್ಯಕ್ಷರು.—ತಂದೇ ತರಬೇಕೆಂದಿಲ್ಲ.

ಶ್ರೀ ಎಂ. ಮಾದಯ್ಯನವರು.—"The state shall endeavour to provide within a period of ten years....." ಎಂದಿದೆ.

ಅಧ್ಯಕ್ಷರು.—ತಾವು ಸುಪ್ರೀಂ ಕೋರ್ಟಿನ ತೀರ್ಮಾನವನ್ನು ಪತ್ರಿಕೆಗಳಲ್ಲಿ ನೋಡಿರಬಹುದು. They are all directive principles. They are not enforceable.

Sri B. HUTCHE GOWDA.—Is it not merally binding on the part of the Government?

ಅಧ್ಯಕ್ಷರು.—Directive principles ಗೆ ಏನು ಅರ್ಥ ಮಾಡಿದ್ದಾರೆಂಬುದನ್ನು ಮೊನ್ನೆಯ ಪತ್ರಿಕೆಗಳಲ್ಲಿ ನೋಡಿ. They are not enforceable. They are only ideals.

ಒಬ್ಬ ನದಸ್ಯರು.—ಸ್ಟ್ಯಾಂಪ್ ಖರ್ಚಿದೆ!!

ಶ್ರೀ ಎಸ್. ರಂಗರಾಯರು.—ಈ ಇಷೂರೆನ್ಸ್ ಪಾಲಸಿಗೆ ಸ್ಟ್ಯಾಂಪು ಖರ್ಚೂ ಇಲ್ಲ, ಮೆಡಿಕಲ್ examination ಗೆ ಡಾಕ್ಟರಿಗೆ ಏನೋ ಒಂದು ಜುಜುಬಿ ಫೀಸು ಕೊಡುತ್ತಾರೆ; ಆದಾಯ ತೆರಿಗೆ ಕೊಡಬೇಕಾಗಿಲ್ಲ. ನೋಟೀಸು, ರಶೀತಿ ಯಾವುದನ್ನೂ ಕೊಡದೆಯಿರುವುದರಿಂದ ಆ ಖರ್ಚೂ ಉಳಿಯುತ್ತಿದೆ. ಹೀಗೆ ಎಲ್ಲಾ ವಿಧದಲ್ಲೂ ಮಿತವ್ಯಯದಿಂದ ನಡೆಯುತ್ತಿದೆಯೆಂಬುದೇನೋ ನಿಜ. ಆದರೆ ಮಾತ್ರ ಮಿತವ್ಯಯವಾಗಿ ನಡೆಸಿಕೊಂಡು ಹೋಗುವುದರ ಜೊತೆಗೆ ಸರಿಯಾದ ರೀತಿಯಲ್ಲಿ ಯಶಸ್ವಿಯಾಗಿ ನಡೆಸುತ್ತಿಲ್ಲ. ಯಾವ ಕಾಗದಗಳಿಗೂ ಜವಾಬು ಕೊಡುವ ವಿಚಾರವೇ ಇಲ್ಲ. ಟಪ್ಪಾಲು ಇಂದು ಬರೆದರೆ ಅದಕ್ಕೆ ಉತ್ತರ ಬರಬೇಕಾದರೆ 3—4 ತಿಂಗಳು ಬೇಕು. ಅದೇ ಬಾಕಿ ಖಾಸಗಿ ಕಂಪೆನಿಗಳಾಗಿದ್ದರೆ ಒಂದೇ ಒಂದು ವಾರದಲ್ಲಿ ಉತ್ತರ ಬರುತ್ತದೆ. ಕಾಗದಗಳು ಬಂದ ಕೂಡ್ಲೆ ಉತ್ತರ ಕೊಡುವ ಪದ್ಧತಿಯನ್ನು ಜಾರಿಗೆ ತರಬೇಕು. ಈ ಒಂದು ಮುಖ್ಯವಾದ ವಿಷಯವನ್ನು ಸರ್ಕಾರದವರು ಆಲೋಚನೆ ಮಾಡುತ್ತಾರೆಂದು ನಂಬಿದ್ದೇನೆ. ಏಕೆಂದರೆ ಇದರಿಂದ ಸರ್ಕಾರಕ್ಕೆ ಸಾವ್ವಜನಿಕರಿಂದ ಸಾಲವೆತ್ತುವ ಸಂದರ್ಭಗಳು ಎಷ್ಟೋ ಕಡಿಮೆಯಾಗಿದೆಯೆಂದು ಹೇಳಬಹುದು. 5 ಕೋಟಿ ರೂಪಾಯಿಗಳಷ್ಟು ಇನ್ಷೂರೆನ್ಸ್ ಹಣ unfunded debt ನಿಮಗಿದೆ. ಈ ಇಲಾಖೆಯನ್ನು ನೀವು ಸ್ಥಾಪಿಸದೆ ಇದ್ದರೆ ಇದುವರೆಗೆ ಅನೇಕಸಲ ನೀವು ಸಾಲಕ್ಕೆ ಹೋಗಬೇಕಾಗಿ ಬರುತ್ತಿತ್ತು. ಅದರಲ್ಲೂ ಇನ್ಷೂರೆನ್ಸ್ ಇಲಾಖೆಯಿಂದ ನಿಮಗೆ ಹಣ ಎಷ್ಟು ಸುಲಭ ರೀತಿಯಲ್ಲಿ ವಸೂಲಾಗುತ್ತಿರುತ್ತದೆಂಬುದನ್ನು ಯೋಚನೆಮಾಡಿ. ಒಬ್ಬ ಮನುಷ್ಯನು ಒಂದು ಪಾಲಿಸಿ ತೆಗೆದುಕೊಂಡು ಮೊದಲು 50 ರೂಪಾಯಿ ಕಂತು ಕಟ್ಟಿದ್ದರೆ ಸಾಕು, ಮುಂದೆ ಹೀಗೆ ಒಮ್ಮೆ ಕಟ್ಟಿದ್ದ ಹಣವನ್ನು ಉಳಿಸಿಕೊಳ್ಳುವುದಕ್ಕಾಗಿ ಬರುವ 20 ವರ್ಷಗಳವರೆಗೂ ನಿಮ್ಮ ಸಾಲಗಾರನಂತೆ ವರ್ಷವರ್ಷವೂ ಹಣ ಕಟ್ಟುತ್ತಿರುತ್ತಾನೆ. ನೀವು ಡಿವ್ಯಾಂಡ್ ನೋಟೀಸ್ ಕೊಡಲಿ, ಅಥವಾ ಕೊಡದಿರಲಿ, ಕಟ್ಟಿದ್ದಕ್ಕೆ ರಶೀದಿ ಕೊಡಲಿ ಅಥವಾ ಇಲ್ಲದಿರಲಿ, ತನ್ನ ಪಾಲಿಸಿಯನ್ನು ಉಳಿಸಿಕೊಳ್ಳುವುದಕ್ಕಾಗಿ ತಾನೇ ಹಣ ತಂದು ನಿಮ್ಮ ಖಜಾನೆಗೆ ತುಂಬುತ್ತಿರುತ್ತಾನೆ. ಆದ್ದರಿಂದ ಇಂಥ ಒಂದು ಕಾಮಧೇನುವಿನಂಥ source ತಾವೀಗ ಸಾಕಾದಷ್ಟು tap ಮಾಡುತ್ತಿಲ್ಲವೆಂದು ನಾನು ಬಹಳ ವಿಷಾದದಿಂದ ಹೇಳುತ್ತೇನೆ. ಅದೇ ಖಾಸಗಿಯವರು ಈ ಲೈಫ್ ಇನ್ಷೂರೆನ್ಸ್ ಉದ್ಯಮವನ್ನು ಹೇಗೆ ನಡೆಸುತ್ತಿದ್ದಾರೆಂದು ಹೇಳುತ್ತೇನೆ. ನನ್ನ ಅನುಭವದಲ್ಲಿ ಖಾಸಗಿ ಸಂಸ್ಥೆಗಳು ಸುಮಾರು $2\frac{1}{2}$ ಕೋಟಿ ರೂಪಾಯಿಗಳ ವ್ಯವಹಾರ ನಮ್ಮ ಸ್ಥಾನದಲ್ಲಿ ನಡೆಸುತ್ತಿವೆ. ಅಂದರೆ ವರ್ಷ ವರ್ಷವೂ ಕಟ್ಟುತ್ತಿರತಕ್ಕ ಪೊಲಿಸಗನ್ನು ಲೆಕ್ಕಹಾಕುವುದಾದರೆ 10—12 ಲಕ್ಷ ರೂಪಾಯಿಗಳನ್ನು ಮೈಸೂರು ದೇಶದಿಂದ ಹೊರಗೆ ಕಳುಹಿಸುವ ಜವಾಬ್ದಾರಿಯನ್ನು ಮೈಸೂರು ದೇಶದ ಪ್ರಜೆಗಳು ಹೊಸಹೊಸದಾಗಿ ಹೊರುತ್ತಿದ್ದಾರೆ. ಇದನ್ನು ತಡೆಗಟ್ಟದೆ ಹೀಗೆಯೇ ಬಿಟ್ಟರೆ ಕಾಲಾನುಕ್ರಮದಲ್ಲಿ ಮೈಸೂರು ದೇಶದ ಹಣ ಬಹುಮಟ್ಟಿಗೆ ಹೊರಗೆ ಹೋಗುವಂತಾಗುತ್ತದೆ. ಆದ್ದರಿಂದ ಆದಷ್ಟು ಜಾಗ್ರತೆ ನಮ್ಮ ಮೈಸೂರು ಜೀವವಿಮಾಸಂಸ್ಥೆಯನ್ನು ಸರಿಯಾದ ತಳಹದಿಯ ಮೇಲೆ ಕಟ್ಟಬೇಕೆಂದು ಹೇಳುತ್ತೇನೆ.

ಪತ್ರವ್ಯವಹಾರದ ವಿಷಯದಲ್ಲಿ ಎಷ್ಟು ಅವ್ಯವಸ್ಥೆಗಳಿವೆಯೆಂಬುದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ಶ್ರೀವರ್ಮಾ ಟಿ. ಸಿದ್ದಲಿಂಗಯ್ಯನವರ ಕಾರ್ ಅಪಘಾತಕ್ಕೀಡಾಯಿತು. ಅವರು ತಮ್ಮ ಕಾರನ್ನು ಒಂದು ಖಾಸಗಿ ಕಂಪೆನಿಯಲ್ಲಿ ಇನ್ಷೂರ್ ಮಾಡಿದ್ದರು. ಈ ಅಪಘಾತ ನಡೆದದ್ದು ಇನ್ನೂ ಲಗೀಗ. ಆಗಲೇ ಅವರಿಗೆ ಹಣ ಬಂದುಬಿಟ್ಟಿತು. ಆದೇ ಶ್ರೀವರ್ಮಾ ಗುಂಡಪ್ಪಗಾರರು ಮೈಸೂರು ಸ್ಟೇಟ್ ಇನ್ಷೂರೆನ್ಸ್ ಇಲಾಖೆಯಲ್ಲಿ ತಮ್ಮ ಕಾರನ್ನು ಇನ್ಷೂರ್ ಮಾಡಿದ್ದರು. ಅವರಿಗೆ ಇಂದಿನವರೆಗೂ ಹಣ ಬರಲಿಲ್ಲ!! ಇದನ್ನೆಲ್ಲಾ ನೋಡಿದರೆ ನಮ್ಮ ಸರ್ಕಾರದವರು ಈ ಇಲಾಖೆಯನ್ನು ಅಷ್ಟಾಗಿ ವ್ಯವಸ್ಥಿತವಾದ ರೀತಿಯಲ್ಲಿ ನಡೆಸುತ್ತಿಲ್ಲವೆಂಬುದು ವೇದ್ಯವಾಗುತ್ತದೆ.

ಆಮೇಲೆ ಇವರ investment policy ವಿಚಾರ ಹೇಳುತ್ತೇನೆ. ಇದು ಬಹಳ ಮುಖ್ಯವಾದ ವಿಷಯ. ಹಾಲಿ ನಮ್ಮ ಮೈಸೂರು ಸ್ಟೇಟ್ ಇನ್ಷೂರೆನ್ಸ್ ಇಲಾಖೆಗೆ ತನ್ನ ಹಣವನ್ನು ತಾನೆ ತೋರಿದಂತೆ invest ಮಾಡುವುದಕ್ಕೆ ಅವಕಾಶವೇ ಇಲ್ಲ. ಬಂದ ಹಣವನ್ನೆಲ್ಲಾ ಸರ್ಕಾರದವರಿಗೆ ಒಪ್ಪಿಸಬೇಕ್ತು. ಖಾಸಗಿ ಕಂಪೆನಿಗಳವರಾದರೋ ತಮ್ಮ investment policy ಯಿಂದ ಇಷ್ಟು ದಿವಸಗಳಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಸಂಪಾದನೆ ಮಾಡಿಬಿಡುತ್ತಿದ್ದರು. ಗೌರ್ನಮೆಂಟ್ ಸೆಕ್ಯೂರಿಟಿಗಳು 70—80 ರೂಪಾಯಿ ಬೆಲೆ ಬಾಳುತ್ತಿದ್ದಾಗ ಬೇರೆ ಎಲ್ಲಾ ಇನ್ಷೂರೆನ್ಸ್ ಕಂಪೆನಿಗಳವರೂ ಕೊಂಡುಕೊಂಡು 100 ರೂಪಾಯಿ (at par) ಬೆಲೆ ಬಂದಾಗ ಮಾರಿಬಿಟ್ಟು ಕೋಟ್ಯಾಂತರ ರೂಪಾಯಿಗಳನ್ನು ಸಂಪಾದನೆ ಮಾಡಿರುವುದಕ್ಕೆ ಅನೇಕ ನಿದರ್ಶನಗಳಿವೆ. ಹೀಗೆಲ್ಲಾ ಇದ್ದರೂ, ಶ್ರೀವರ್ಮಾ ಆಚಾರ್ಯರವರು ನೀವು ಕೊಡುತ್ತಿರತಕ್ಕ $3\frac{1}{2}\%$ ಬಡ್ಡಿ ಜಾಸ್ತಿಯೆಂದು ಹೇಳಿದರು. ನಾನಿದನ್ನು ಖಂಡಿತ ಒಪ್ಪುವುದಿಲ್ಲ. ಈಗ ಅವರಿಗೆ ಬೇರೆಕಡೆ invest ಮಾಡುವುದಕ್ಕೆ ಅವಕಾಶವಿಲ್ಲದ್ದರಿಂದ ಹೀಗೆ $3\frac{1}{2}\%$ ಮಾತ್ರ ಬಂತು. ಹಾಗಿಲ್ಲದೆ ಮೊದಲಿನಿಂದಲೂ ಅವರಿಗೆ ಪೂರ್ಣ ಕೈವಾಡವಿದ್ದರೆ ಅವರ 5 ಕೋಟಿ ರೂಪಾಯಿಗಳು ಇಷ್ಟು ದಿವಸಗಳಲ್ಲಿ 7 ಕೋಟಿ ರೂಪಾಯಿಗಳಾಗುತ್ತಿತ್ತು. ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳನ್ನು ಕೊಂಡಿದ್ದರೇ $3\frac{1}{2}\%$ ಸಿಕ್ಕುತ್ತದೆ. ಆದಾಯ ತೆರಿಗೆ ಕೊಡಬೇಕಾದ್ದಿಲ್ಲವೆಂದು ಎಷ್ಟೋ ಜನರು ಅದರಲ್ಲಿ invest ಮಾಡುತ್ತಿದ್ದಾರೆ. ಇನ್ನೂ ಬೇರೆ ಕಂಪೆನಿಗಳವರು 5% + 6%-ಬರುವಂಥ ಕಡೆಗಳಲ್ಲಿ invest ಮಾಡಿ ಸಂಪಾದಿಸುತ್ತಿರುವ ನಿದರ್ಶನಗಳಿವೆ. ಆದ್ದರಿಂದ ಸರ್ಕಾರದವರು ಕೊಡುತ್ತಿರತಕ್ಕ ಬಡ್ಡಿಯೇನೂ ಹೆಚ್ಚಲ್ಲ.

ಒಟ್ಟಿನಲ್ಲಿ ನಮ್ಮ ಮೈಸೂರು ಸ್ಟೇಟ್ ಲೈಫ್ ಇನ್ಷೂರೆನ್ಸ್ ಇಲಾಖೆಯನ್ನು ಭದ್ರವಾಗಿ ಕಟ್ಟುವುದಕ್ಕೆ ಒಂದು ಸಲಹೆಯನ್ನು ಕೊಡುತ್ತೇನೆ. ಜಿ ವವಿಮಾ ಉದ್ಯಮದಲ್ಲಿ ಮೊದಲು ಮುಖ್ಯವಾಗಿ ನೋಡಬೇಕಾದ್ದು selection of lives. ಇದು ಚೆನ್ನಾಗಿರಬೇಕು; mortality rate ಕಡಿಮೆಯಾಗಿರಬೇಕು; lapse ratio ಕಡಿಮೆಯಾಗಿರಬೇಕು—ಇವು ಮುಖ್ಯವಾದ ವಿಷಯದಲ್ಲಿ ನಾವು ಸರಿಯಾಗಿರುವಂತೆ ತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಿ ನಾನು ಈ ಮಸೂದೆಯನ್ನು ಅನುಮೋದಿಸುತ್ತೇನೆ.

ಶ್ರೀ ಜಿ. ಎ. ಆಚಾರ್ಯರವರು.—ಮಾನ್ಯ ಸದಸ್ಯರು, ಇನ್ಷೂರೆನ್ಸ್ ಕಂಪೆನಿಗಳು ಹಿಂದೆ ಗೌರ್ನಮೆಂಟ್ ಸೆಕ್ಯೂರಿಟಿಗಳು 78—80 ರೂಪಾಯಿಗೆ ಇಳಿದಿದ್ದಾಗ ಕೊಂಡು 100 ರೂಪಾಯಿಯಾದಾಗ ಮಾರಿ ಕೋಟ್ಯಾಂತರ ರೂಪಾಯಿ ಹಣ ಸಂಪಾದಿಸಿದರೆಂದು ಹೇಳಿ, ನಮ್ಮ

ಇನ್ಶೂರೆನ್ಸ್ ಇಲಾಖೆಯವರಿಗೂ ಬೇಕಾದಕಡೆ invest ಮಾಡುವುದಕ್ಕೆ ಅವಕಾಶ ಕೊಟ್ಟಿದ್ದರೆ 3½% ಗಿಂತಲೂ ಹೆಚ್ಚಿಗೆ ಬಡ್ಡಿ ಬರುತ್ತಿತ್ತೆಂದು ಹೇಳಿದರು. ಈಗ ಗ್ವರ್ನ್ಮೆಂಟ್ ಆಫ್ ಇಂಡಿಯಾ ಸೆಕ್ಯೂರಿಟಿಗಳು 92 ರೂಪಾಯಿಗೆ ಇಳಿದುಹೋಗಿರುವುದು ಅವರಿಗೆ ಗೊತ್ತಿದೆಯೇ? ನಮ್ಮ ಇನ್ಶೂರೆನ್ಸ್ ಇಲಾಖೆಯವರಿಗೇನಾದರೂ ಸ್ವತಂತ್ರವಾಗಿ ಹಣ invest ಮಾಡುವ ಅಧಿಕಾರವಿದ್ದಿದ್ದು, ಅವರೇನಾದರೂ ಈ ಸೆಕ್ಯೂರಿಟಿಗಳನ್ನು ಕೊಂಡುಕೊಂಡುಬಿಟ್ಟಿದ್ದರೆ ತಮ್ಮ ಹಣವನ್ನೆಲ್ಲಾ ಕಳೆದುಕೊಳ್ಳುತ್ತಿದ್ದರೆಂಬುದು ಅವರಿಗೆ ಗೊತ್ತೇ?

*ಶ್ರೀ ಎಚ್. ಹುಚ್ಚಮಾಸ್ತಿಗೌಡರು (ತುಮಕೂರು ಜಿಲ್ಲೆ).—ನಮ್ಮ ಸರ್ಕಾರದಲ್ಲಿ ಈಗಿರತಕ್ಕ ಮಾನ್ಯ ಮಂತ್ರಿಗಳ ಪೈಕಿ ಒಬ್ಬಿಬ್ಬರನ್ನು ಬಿಟ್ಟರೆ ಇನ್ನುಳಿದವರೆಲ್ಲರೂ ಹಳ್ಳಿಯ ಜೀವನವನ್ನು ಚೆನ್ನಾಗಿ ತಿಳಿದುಕೊಂಡವರಾಗಿರುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಇಂಥಾ ಮಂತ್ರಿಮಂಡಲವಿದ್ಯಾಗ್ಯೂ ನಮ್ಮ ದೇಶದಲ್ಲಿ ಮುಖ್ಯ ಕಸುಬಾಗಿರತಕ್ಕ ವ್ಯವಸಾಯಕ್ಕೆ ಸರ್ಕಾರದವರು ಎಷ್ಟು ಗಮನಕೊಡಬೇಕೋ ಅಷ್ಟನ್ನು ಕೊಟ್ಟಿಲ್ಲ ವೆಂಬುದು ನನ್ನಭಿಪ್ರಾಯ. ಮಂತ್ರಿಗಳಿಗೆ ಅವಶ್ಯಕವಾಗಿ ಇರಬೇಕಾದ 'Rural bias' ಇಲ್ಲ. ಈ ವ್ಯವಸಾಯದ ಬಾಬಿನಲ್ಲಿ ಹೊಸಹೊಸ ಮಾರ್ಗಗಳನ್ನು ಕಂಡುಹಿಡಿಯತಕ್ಕ ಬಗ್ಯೆ, ವ್ಯವಸಾಯ ಪರೀಕ್ಷಾ ಕ್ಷೇತ್ರಗಳನ್ನು ಹೆಚ್ಚಿಸಿ ತನ್ಮೂಲಕ ನೂತನ ಮಾರ್ಗಗಳಲ್ಲಿ ಹೆಚ್ಚು ಶ್ರದ್ಧೆಯಿಂದ ಜನರು ವ್ಯವಸಾಯವನ್ನವಲಂಬಿಸುವ ಬಗ್ಯೆ, ಹೆಚ್ಚಿನ ಪ್ರೋತ್ಸಾಹಗಳನ್ನು ನೀಡತಕ್ಕದ್ದು ತೀರಾವಶ್ಯಕ. ಈ ಬಗ್ಯೆ ತಾವು ಹೆಚ್ಚು ಹಣವನ್ನು ಒದಗಿಸುತ್ತೀರೆಂದು ನಾನು ನಂಬಿದ್ದೇನೆ. ಆದರೆ ವ್ಯವಸಾಯ, ಪೆಟರಿನೆರಿ ಇಲಾಖೆಗಳಲ್ಲಿ ಕೆಲಸ ಕಾರ್ಯಗಳು ಸರಿಯಾಗಿ ನಡೆಯದೆ, ಆ ಬಾಬುಗಳಿಗೆ ಒದಗಿಸಿದ್ದ ಪೊಬಲಗುಗಳೆಲ್ಲಾ ಖರ್ಚಾಗದೆ ಉಳಿದು ಹೋಗಿವೆ. ಹಾಗೆ ಎಲ್ಲೆಲ್ಲ ಕೆಲಸಕಾರ್ಯಗಳು ಸರಿಯಾಗಿ ನಡೆಯುತ್ತಿಲ್ಲವೋ ಅವುಗಳನ್ನೆಲ್ಲಾ ಸರಿಪಡಿಸುವುದು ಹಾಗೂ ಅನಾವಶ್ಯಕವಾಗಿ ಆಗುತ್ತಿರುವ ಖರ್ಚುಗಳನ್ನು ತಪ್ಪಿಸತಕ್ಕದ್ದು ಅವಶ್ಯಕ. ಆದರೆ ಸರ್ಕಾರದವರು ಈ ವ್ಯವಸಾಯಾಭಿವೃದ್ಧಿಗೆ ಸಾಕಷ್ಟು ಉತ್ತೇಜನ ಮತ್ತು ಪ್ರೋತ್ಸಾಹಗಳನ್ನು ಕೊಡದೆ ಇರುವುದರಿಂದ, ದೇಶದಲ್ಲಿ ವ್ಯವಸಾಯವು ದಿನೇದಿನೇ ಕ್ಷೀಣಗತಿಗೆ ಬಂದು, ವರ್ಷಂಪ್ರತಿ ಲಕ್ಷಾಂತರ ಎಕರೆ ಜಮೀನು ಪಾಳು ಬೀಳುತ್ತಿದೆ. ಆದುದರಿಂದ ತಾವು ಈ ಬಗ್ಯೆ ಸರಿಯಾದ ಕಾರ್ಯಕ್ರಮಗಳನ್ನು ಕೈಗೊಂಡು ಈ ವ್ಯವಸಾಯವು ಹೆಚ್ಚುಹೆಚ್ಚು ಜನರನ್ನು ಆಕರ್ಷಣೆ ಮಾಡುವಂತೆ ಮಾಡುತ್ತೀರೆಂದು ತಿಳಿದುಕೊಂಡಿದ್ದೇನೆ.

ಈ ವ್ಯವಸಾಯಾಭಿವೃದ್ಧಿಯ ಬಗ್ಯೆ ನಾನು ಮತ್ತೊಂದು ಅಂಶವನ್ನೀಗ ಪ್ರಸ್ತಾಪ ಮಾಡಬೇಕಾಗಿದೆ. ಗ್ರಾಮಾಂತರಗಳಲ್ಲಿರತಕ್ಕ ರೈತರಿಗೆ ವ್ಯವಸಾಯಕ್ಕೆ ಬೇಕಾದ ಗೊಬ್ಬರ, ಗೋಡು ಇತ್ಯಾದಿಗಳನ್ನು ಜಮೀನಿಗೆ ಸಾಗಿಸಲು ಸರಿಯಾದ ಒಂದು ಗಾಡಿರಸ್ತೆಗಳಿಲ್ಲ. ಈ ಬಾಬಿನಲ್ಲಿ ರೈತರಿಗೆ ತುಂಬಾ ತೊಂದರೆಯಾಗಿದೆ. ಅದರಲ್ಲೂ ಗ್ರಾಮಾಂತರ ರಸ್ತೆಗಳ ದುರಸ್ತಿಗಾಗಿ ತಾವು ಎಷ್ಟು ಹಣ ಒದಗಿಸಿದ್ದೀರಿ? ಅದರಲ್ಲೂ ದೊಡ್ಡ ನಿರಾವರಿ ಪ್ರದೇಶವಿರುವ ಕಡೆಗಳಲ್ಲಿ ಕಷ್ಟ ಹೆಚ್ಚು ಪ್ರಮಾಣದಲ್ಲಿದೆ. ಈ ಬಗ್ಯೆ ತಾವೇನೂ ನಿಗಾ ತೆಗೆದುಕೊಂಡಿರುವಂತೆ ಕಾಣುತ್ತಿಲ್ಲ. ಹೀಗಾಗಿ ರೂರಲ್ ಡೆವಲಪ್‌ಮೆಂಟ್ ಹೆಲ್ತ್ ಅಂಡ್ ಸ್ಯಾನಿಟೇಷನ್ ಬಾಬಿನಲ್ಲಿ ತಾವು ಒದಗಿಸಿದ್ದ ಹಣವೆಲ್ಲಾ ಹಾಗೆಯೇ ಉಳಿದುಹೋಗುತ್ತಿದೆ. ಈರೀತಿ ಆಗದಂತೆ ಇದನ್ನೆಲ್ಲಾ ತಾವು ಬೇಗ ಸರಿಪಡಿಸಿ ಜನರಿಗೆ ಹೆಚ್ಚಿನ ಅನುಕೂಲ ಪಡಿಸಬೇಕು.

ಇನ್ನು ರೈತರಿಗೆ ಅನುಕೂಲವಾಗಲೆಂಬ ಒಂದು ದೃಷ್ಟಿಯಿಂದ ತಾವು ಅನೇಕಕಡೆ ಬೇಸಿಕ್ ಫಾರಂಗಳನ್ನು ತೆರೆದು ರೈತರಿಗೆ ಒಳ್ಳೆಯ ಉತ್ತಮ ದರ್ಜೆಯ ಬಿತ್ತನೆ ಬೀಜಗಳನ್ನು ಒದಗಿಸಲು ಏರ್ಪಾಡು ಮಾಡಿದ್ದೀರಿ. ಇದು ಬಹಳ ಸಂತೋಷಕರವಾದ ವಿಷಯ. ಆದರೆ ಅಲ್ಲಿ ಯಾವ ರೀತಿಯಲ್ಲಿ ಕೆಲಸಕಾರ್ಯಗಳು ನಡೆಯುತ್ತಿವೆಯೆಂಬ ಬಗ್ಯೆ ನಾನೇ ಈ ಸಭೆಯ ಮಾನ್ಯ ಸದಸ್ಯರು 2—3 ಜನರನ್ನು ಕರೆದುಕೊಂಡು ಹೋಗಿ ಸ್ವತಃ ನೋಡಿಕ್ಕೊಂಡು ಬಂದಿದ್ದೇನೆ. ಆದರೆ ಅಂಥ ಬೇಸಿಕ್ ಫಾರಂಗಳ ಪಕ್ಕದಲ್ಲಯೇ ಸಾಧಾರಣವಾಗಿರತಕ್ಕ ಒಬ್ಬ ರೈತನು ಆತನ ಜಮೀನಿನಲ್ಲಿ ಎಷ್ಟು ಚೆನ್ನಾಗಿ ಬೆಳೆಗಳನ್ನು ತೆಗೆಯುತ್ತಿದ್ದಾನೋ ಅಷ್ಟು ಚೆನ್ನಾಗಿ ಈ ಬೇಸಿಕ್ ಫಾರಂಗಳಲ್ಲಿ ತೆಗೆಯುತ್ತಿಲ್ಲ. ಅಂದಮೇಲೆ ಇಂಥಾ ಬೇಸಿಕ್ ಫಾರಂಗಳನ್ನು ಆದಷ್ಟು ಬೇಗ ಮುಚ್ಚುವುದು ಲೇಸಾಗಿದೆ. ತಾವು ಈ ಬಗ್ಯೆ ಬೊಂಬಾಯಿ ಪ್ರಾಂತ್ಯದಲ್ಲಿ Master Farmers ಎಂದು ಮಾಡಿದ್ದಾರಲ್ಲ, ಆ ಮಾದರಿಯಲ್ಲಿ ಇಲ್ಲಿಯೂ ಏರ್ಪಾಡುಮಾಡಿ ತನ್ಮೂಲಕ ರೈತರಿಗೆ ಒಂದು ಪ್ರೋತ್ಸಾಹ ನೀಡಿ. ಈಬಗ್ಯೆ ಅಲ್ಪಸ್ವಲ್ಪ ಖರ್ಚನ್ನು ತಾವು ವಹಿಸಿ, ಉತ್ತಮವಾದ ಬೆಳೆ ತೆಗೆಯಲು ಅನುಕೂಲವಾಗುವಂತೆ ಯೋಗ್ಯವಾದ ಬಿತ್ತನೆ ಬೀಜಗಳನ್ನು ತಯಾರಿಸುವುದು ಅತ್ಯಾವಶ್ಯಕ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ರೈತರಿಗೆ ಈಗಾಗಲೇ ನಾವು ಬೇಕಾದಷ್ಟು ಬೀಜದ ಭತ್ತವನ್ನು ಕೊಟ್ಟಿದ್ದೇವೆ. ಆದರೆ ಅವರು ನಮಗೆ ವಾಪಸ್ಸು ಬೀಜವನ್ನು ಕೊಡುವಾಗ ಜೊಳ್ಳು—ಪೊಳ್ಳು ಸೇರಿಸಿ ತಂದು ಕೊಟ್ಟಿದ್ದರಿಂದ ತುಂಬಾ ತೊಂದರೆಗಳುಂಟಾಗಿವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ವ್ಯವಸಾಯದ ಇಲಾಖಾಧಿಕಾರಿಗಳಿಗೆ ಗೊಬ್ಬರ, ಕಬ್ಬಣ ಇತ್ಯಾದಿ ಸಾಮಾನುಗಳ ಮಾರಾಟದ ಬಡುಕನ್ನು ವಹಿಸಿದ್ದರಿಂದ ಆ ಇಲಾಖೆಯಲ್ಲಿದ್ದ ಅಗ್ರಿಕಲ್‌ಚರಲ್ ಇನ್‌ಸ್ಪೆಕ್ಟರು ಫಿಲ್ಡ್‌ಮನ್ ಇತ್ಯಾದಿ ನೌಕರರೆಲ್ಲರೂ ಈ ವ್ಯವಸಾಯದ ಮೇಲೆ ಶ್ರದ್ಧೆ ವಹಿಸದೆ ಎಲ್ಲಾ ಜವಾಬ್ದಾರಿಯನ್ನೂ ರೈತರ ಮೇಲೇ ಬಿಟ್ಟಿದ್ದರಿಂದ ಅವರ ಬೆಳೆಯಲ್ಲಿ ಹಾಗೆ ಜೊಳ್ಳು-ಪೊಳ್ಳಾಗಲು ಅವಕಾಶವಾಯಿತು.

The Hon'ble Sri T. MARIAPPA.—In fact, after the sale of manure is transferred to the co-operative societies now we want these technical officers to devote mainly to the technical aspect of the whole problem and I can assure the Hon'ble Member that that should be done and if any is found wanting, he will be suitably dealt with.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಬಹಳ ಸಂತೋಷ. ಮುಂದಕ್ಕೆ ಇದನ್ನು ಸರಿಪಡಿಸುತ್ತೇವೆಂದು ಮಾನ್ಯ ಮಂತ್ರಿಗಳು ತಿಳಿಸಿದ್ದು ನನಗೆ ಬಹಳ ಸಂತೋಷದ ವಿಚಾರ.

ಇನ್ನು ನಮ್ಮ ದೇಶದಲ್ಲಿ ರೈತರಿಗೆ ದನಕುರಿಗಳನ್ನು ಸಾಕತಕ್ಕದ್ದು ಅತಿ ಮುಖ್ಯವಾದ ಉಪಕಸುಬಾಗಿದೆ. ಈ ವಿಚಾರದಲ್ಲಿ ಸರ್ಕಾರದವರು ಹೆಚ್ಚಿನ ಶ್ರದ್ಧೆ ವಹಿಸಬೇಕಾಗಿದೆ. ಇಂದು ನಮ್ಮ ದೇಶದಲ್ಲಿ ಪ್ರತಿವರ್ಷವೂ ರೈತರು ಎತ್ತು, ಎಗ್ಯೆರೆಗಳನ್ನು ಮಾರುವುದರಿಂದ

(ಶ್ರೀ ಎಚ್. ಹುಚ್ಚಮಾಸ್ತಿಗೌಡರು.)

ಲಕ್ಷಾಂತರ ರೂಪಾಯಿ ಸಂಪಾದಿಸುತ್ತಾರೆ. ಸರ್ಕಾರದವರು ರೈತರಿಗೆ ಉತ್ತಮ ರೀತಿಯ ಬೀಜದ ಹೋರಿ, ಬೀಜದ ಟಗರು, ಇತ್ಯಾದಿಗಳ ಸಹಾಯವನ್ನು ಒದಗಿಸುವುದಾದರೆ ಇನ್ನೂ ಹೆಚ್ಚಿನ ಲಾಭ ಸಂಪಾದಿಸಲು ಅವಕಾಶವಿದೆ. ಆದುದರಿಂದ ಸರ್ಕಾರದವರು ಉತ್ತಮ ದರ್ಜೆಯ ರಾಸುಗಳನ್ನು ಹೆಚ್ಚಿಸತಕ್ಕ ಬಗ್ಗೆ ಒಳ್ಳೆಯ ಬೀಜದ ಹೋರಿಗಳನ್ನು ಹೆಚ್ಚು ಹೆಚ್ಚಾಗಿ ಒದಗಿಸಬೇಕೆಂದು ಸೂಚಿಸುತ್ತೇನೆ. ಕುರಿ ಕೋಳಿ ಇತ್ಯಾದಿಗಳನ್ನು ಸಾಕತಕ್ಕ ಬಗ್ಗೆ ದೇಶದ ನಾನಾ ಭಾಗಗಳಲ್ಲಿ ಅನೇಕ ಫಾರಂಗಳನ್ನಿಟ್ಟಿದ್ದರು. ಆದರೆ ಈ ದಿವಸ ಅವುಗಳನ್ನೆಲ್ಲಾ ತೆಗೆದು ಹೊನರಘಟ್ಟದಲ್ಲಿ ಒಂದು ಕಡೆ ಮಾತ್ರ ಇಟ್ಟಿದ್ದಾರೆ. ಇದು ಸ್ತೋತ್ರಾರ್ಹವಾದ ವಿಷಯ. ಅದೇ ರೀತಿ ಕುರಿಗಳನ್ನು ಸಾಕುತ್ತಿದ್ದಾರೆ. ಮಾಂಸಕ್ಕಾಗಿಯೇ ಕೆಲವು ಕಡೆ ಕುರಿಗಳನ್ನು ಸಾಕುತ್ತಿದ್ದಾರೆ. ಕೆಲವು ಉಣ್ಣೆಗಾಗಿಯೇ ಹೆಚ್ಚು ಉಪಯೋಗವಾಗುತ್ತವೆ. ಆದರೆ ಹಾಗೆ ಕುರಿಯಿಂದ ಸಿಕ್ಕತಕ್ಕ ಮಾಂಸದ ಬೆಲೆಯೇನು, ಉತ್ಪತ್ತಿಯಾಗತಕ್ಕ ಉಣ್ಣೆಯ ಬೆಲೆಯೇನು? ಈ ಎರಡನ್ನೂ ತಾವು ಆಲೋಚಿಸಿ ನೋಡಿದರೆ, ಯಾವ ಯಾವ ಪ್ರಾಣಿಗಳನ್ನು ಸಾಕತಕ್ಕದ್ದು ಉತ್ತಮ ಮತ್ತು ಪ್ರಯೋಜನಕಾರಿ ಎಂಬುದನ್ನು ಪರಿಶೋಧನೆ ನಡೆಸಬೇಕು. ಬ್ರೀಡಿಂಗ್‌ಬುಲ್ಸ್ ತಯಾರು ಮಾಡಲು ಸ್ವಲ್ಪ ಹಣ ಒದಗಿಸಲಾಗಿದೆ. ಲಕ್ಷಾಂತರ ಹಳ್ಳಿಕಾರ ದನಗಳಿರತಕ್ಕ ದೇಶದಲ್ಲಿ ಉತ್ತಮವಾದ ಬೀಜದ ಹೋರಿಗಳು ಬೇಕಾದರೆ ಕಡೆ ಪಕ್ಷ 500 ಹಸುಗಳನ್ನಾದರೂ ಇಟ್ಟು ಪರೀಕ್ಷಾ ಕೇಂದ್ರ ಏರ್ಪಾಡಾಗಬೇಕು. ಆದರೆ ಹೀಗೆ ಜಾನುವಾರುಗಳ ಅಭಿವೃದ್ಧಿಗಾಗಿ ಮತ್ತು ಉತ್ತಮ ತಳಿ ಹೆಚ್ಚಿಸತಕ್ಕ ವಿಧಾನಗಳನ್ನು ಬಗ್ಗೆ ಸರ್ಕಾರದವರು ಒದಗಿಸಿರತಕ್ಕ ಮೊಬಲಗು ತೀರ ಕಮ್ಮಿ.

